ಹೆ.ಮೊ. ರಾಮಚಂದ್ರ

ಪಂಚಮ

ಸಂಪುಟ-12
ಸಂಚಿಕೆ-3
1-15, ಫೆಬ್ರುವರಿ, 88
ಬೆಲೆ : 1 ರೂ.



ರಾಜಧಾನಿಯ ಡಾಂಬರು ರಸ್ತೆಗಳಲ್ಲಿ ಅಲೆಅಲೆಯಾಗಿ ಹರಿದ 50 ಸಾವಿರ ದಲಿತರ ಬೃಹತ್ ಪ್ರವಾಹ

ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು

ಜನವರಿ 25

ಬೆಂಗಳೂರಿನ ಚಳಿ ಹಿಡಿದ ಬೀದಿಗಳಿಗೆ ಬಾಯಿ ಬಂದಿತ್ತು. ಸದಾ ಉಳ್ಳವರ ಒಪ್ಪ ಓರಣಗಳ ಥಳುಕಿಗೆ ಬೆರಗಾಗಿದ್ದ ಬೀದಿಗಳು ನೆಲ ಗುಡಿಸುವ ನೆಲದ ಮಕ್ಕಳ ಒಕ್ಕೊರಲ ದನಿಗೆ ಮುದಗೊಂಡಿದ್ದವು.

ಅಂದು ಜಗತ್ತು ಕಂಡರಿಯದ ಅಮಾನವೀಯ ನಡವಳಿಕೆಯ ವಿರುದ್ಧ ಮಾನವತೆ ಸಿಡಿದು ನಿಂತ ದಿನ. ನಾಚಿಕೆ ಅವಮಾನಗಳಿಂದ ತಲೆ ತಗ್ಗಿಸಿದ್ದ ಮಾನವ ಜನಾಂಗ ತಲೆ ಎತ್ತುವ ನೈತಿಕತೆ ಮೈಗೂಡಿಸಿಕೊಂಡ ದಿನ.

ಅಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸಾವಿರಾರು ಹೃದಯವಂತ ಜನ ಬೆಳಗಾವಿ ಜಿಲ್ಲೆಯ ಬೆಂಡಿಗೇರಿಯಲ್ಲಿ ದಲಿತರಿಗೆ ಮಲ ತಿನ್ನಿಸಿದ್ದನ್ನು ಪ್ರತಿಭಟಿಸಲು ನಾಡಿನ ಮೂಲೆ ಮೂಲೆಗಳಿಂದ ಬೆಂಗಳೂರಿಗೆ ಬಂದಿದ್ದರು. ಎಣ್ಣೆಕಾಣದ ತಲೆ, ಬತ್ತಿದ ಕಪ್ಪು ಮುಖ, ಚಿಂದಿ ಅರಿವೆ, ಕಷ್ಟಕಾರ್ಪಣ್ಯಗಳ ಸಂಗಮವೇ ಒಂದಾಗಿ, ನದಿಯಾಗಿ ನಗರಕ್ಕೆ ಹರಿದು ಬಂದಿತ್ತು. ಎಲ್ಲ ಬತ್ತಿದ ಕಣ್ಣುಗಳಲ್ಲೂ ಪ್ರಜ್ವಲಿಸುವ ಜ್ಯೋತಿಗಳು. ಮಲತಿನ್ನಿಸಿ ಆರು ತಿಂಗಳು ಕಳೆದಿದ್ದರೂ ಕಣ್ಣು ಕಿವಿ ಕಳೆದುಕೊಂಡಂತಿದ್ದ ಜನತಾ ಸರ್ಕಾರದ ಕಣ್ಣು ಬಿಡಿಸುವುದು, ಸಂವೇದನೆಗಳನ್ನೇ ಕಳೆದುಕೊಂಡು ಕೊರಡಾದ ಮನುಷ್ಯನ ಹೃದಯವನ್ನು ಚಿಗುರಿಸುವುದು ಆ ಜ್ಯೋತಿಗಳ ಉದ್ದೇಶವಾಗಿತ್ತು.

"ಕುರುಡು ಹೆಗಡೇ ಸರಕಾರವೇ ಕಣ್ಣುಬಿಡು,
ದಲಿತರಿಗೆ ಮಲ ತಿನ್ನಿಸಿದವರನ್ನು ಶಿಕ್ಷಿಸು"

ಎಂಬ ಬ್ಯಾನರ್ ಹಾಗೂ ಫಲಕಗಳನ್ನು ಹಿಡಿದ ಸಹಸ್ರಾರು ಮಂದಿ ದಲಿತರು ರಾಜ್ಯದ ಎಲ್ಲ ಹಳ್ಳಿ, ಪಟ್ಟಣಗಳಿಂದ ರಾಜಧಾನಿಗೆ ಬಂದಿದ್ದರು. ರಾಜಧಾನಿಗೆ ಬರುವ ಎಲ್ಲ ಬಸ್ಸು ರೈಲುಗಳ ತುಂಬ ದಲಿತರು. ಮಕ್ಕಳು, ಮಹಿಳೆಯರು, ಮುದುಕರು, ಯುವಕರು ಕಣ್ಣು ಕಂಡಷ್ಟು ದೂರ ನೀರಿನಂತೆ ಹರಿಯುವುದು, ಬೆಟ್ಟದಂತೆ ನಿಲ್ಲವುದು, ಕಪ್ಪುಜನರ ಸಾಲುಸಾಲು. ಎಲ್ಲರದೂ ಒಂದೇ ಗುರಿ–ಒಂದೇ ಹಾಡು. "ಜಾತಿಬಿಡಿ ಮತಬಿಡಿ, ಮಾನವತೆಗೆ ಜೀವ ಕೊಡಿ."

(4ನೇ ಪುಟಕ್ಕೆ)

ಬೆಂಡಿಗೇರಿಯ ರಾಕ್ಷಸ ಮನಸ್ಸು ಕಂಡು ರೋಸಿಹೋದ ದಲಿತ ಸಮುದಾಯ ತನ್ನ ಅಂತರಾಳದ ನೋವನ್ನು, ಸಿಟ್ಟನ್ನು, ಆಕ್ರೋಶವನ್ನು ತೆರೆದು ತೋರಲು ರಾಜಧಾನಿಗೆ ಬಂದಿತ್ತು.

ಅಂದು ಡಾಂಬರು ರಸ್ತೆಗಳ ತುಂಬ ಅಲೆ ಅಲೆಯಾಗಿ ಹರಿದ ಕಪ್ಪು ಜನಪ್ರವಾಹ. ಇತಿಹಾಸದಲ್ಲಿ ಎಂದೂ ನಡೆದಿರದ ದಲಿತರ ಈ ಬೃಹತ್ ರ್‍ಯಾಲಿಯ ಗುರಿ ಮನುಷ್ಯನ ಹೃದಯ ಚಿಗುರಿಸುವುದು.

● ಇಂದೂಧರ ಹೊನ್ನಾಪುರ

[illegible] ಮಾತು

ಊರ ಮಧ್ಯದ ಕಣ್ಣ ಕಾಡಿನೊಳಗೆ....

ಹಿಂದೆ ಒಬ್ಬ ಕಣ್ಣಿನ ಡಾಕ್ಟ್ರು ಇದ್ರು. ಜನರ ಕಣ್ಣು ನೋಡಿದ ಕೂಡಲೇ ಅವರಿಗೆ ಅದರ ದೋಷ ಅದಕ್ಕೆ ಮಾಡ ಬೇಕಾದ ಚಿಕಿತ್ಸೆ ಥಟ್ಟನೆ ಹೊಳೆದು ಬಿಡುತ್ತಿತ್ತು. ಹಿಂಗಾಗಿ ಅವರು ಕಣ್ಣಿನ ಜತೆ ಮಾತಾಡ್ತಾರೆ ಅನ್ನೋವಷ್ಟು ಪ್ರಖ್ಯಾತ ರಾಗಿದ್ದರು.

ಒಂದು ಸಾರಿ ಅವರ ಬಳಿ ಒಬ್ಬ ರೋಗಿ ಬಂದ. ಅವನ ಎಡಗಣ್ಣು ದೋಷ ಇತ್ತು. ಆಪರೇಷನ್ ಮಾಡಿದ ಡಾಕ್ಟ್ರು ತಲೆಯ ಮೇಲೆ ಯಾವ ಕಾರಣಕ್ಕೂ ನೀರು ಬೀಳಬಾರದೆಂದೂ ಬಿದ್ದರೆ ಕಣ್ಣೇ ಊನವಾಗುವ ಅಪಾಯ ಇದೆಯೆಂದೂ ಎಚ್ಚರಿಸಿ ಕಳಿಸಿದರು.

ರೋಗಿ ಮೂರು ದಿನಗಳ ನಂತರ ಮತ್ತೆ ಹಾಜರಾದ. ಅವನ ಎಡಗಣ್ಣು ಊನಗೊಂಡಿತ್ತು. ಕೇಳಿದ್ದಕ್ಕೆ ಹೇಳುವುದೋ ಬೇಡವೋ ಅಂತ ಅನುಮಾನಿಸುತ್ತಲೇ ನಿಜ ಹೇಳಿದ. ತಾನು ಮನೆಗೆ ಹೋದ ಮೇಲೆ ಹೆಂಡ್ತಿ ಸ್ನಾನ ಮಾಡಿ ಶಿವಪೂಜೆ ಮಾಡು ವಂತೆ ಒತ್ತಾಯಿಸಿದ್ದಾಗಿಯೂ, ಡಾಕ್ಟ್ರು ಎಚ್ಚರಿಕೆ ತಿಳಿಸಿದ್ದಕ್ಕೆ "ಅವರು ಹೊಲೇರೊ ಮಾದಿಗರೋ ಅಂತೆ. ಅದ್ಕೆ ಹಂಗೇಳ್ಯಾರೆ ನೀವು ಸ್ನಾನ ಮಾಡಿ, ಅವರು ಮುಟ್ಟಿದ ಮೈಲಿಗೆ ತೊಳೀಲಿ" ಎಂದು ಒತ್ತಾಯಿಸಿದ್ದಾಗಿಯೂ ಅದರಂತೆ ಸ್ನಾನ ಮಾಡಿ ಬಿಟ್ಟಿದ್ದಾಗಿ ತಿಳಿಸಿದ. ನಾಡಿ ಬಡಿತ ನೋಡುತ್ತಿದ್ದ ಹೊಲೇಮಾದಿಗ ಡಾಕ್ಟ್ರ ನಾಡಿ ಕ್ಷಣಹೊತ್ತು ತಣ್ಣಗಾಯಿತು. ಆದರೂ ತಡ ಕೊಂಡು "ಇನ್ನೇನೂ ಮಾಡೋಕ್ಕಾಗಲ್ಲ" ಅಂತ ಹೇಳಿ ಕಳುಹಿಸಿ ದರು.

ಆ ರೋಗಿ ತನ್ನ ಕುರುಡುಗಣ್ಣನ್ನು ಮುಂದೆ ಮಾಡಿಕೊಂಡು ನಾನಾ ಡಾಕ್ಟ್ರುಗಳ ಬಳಿ ಹೋಗಿ ಅಂಗಲಾಚಿದ. ಅವರೆಲ್ಲಾ ಆಪರೇಷನ್ ಮಾಡಿದ್ದು ಯಾರು ಅನ್ನೋದು ತಿಳಿದ ಕೂಡಲೇ "ಅವರು ಮುಟ್ಟಿದ ಮೇಲೆ ಮುಗೀತಪ್ಪಾ, ನಾವೇನೂ ಮಾಡ ಕಾಗಲ್ಲ, ಅಷ್ಟು ಸಾಮರ್ಥ್ಯ ನಮಗಿಲ್ಲ", ಎಂದೇದು ವಾಪಸು ಕಳುಹಿಸಿ ಬಿಟ್ಟರು.

ರೋಗಿಯ ಆ ಕಣ್ಣು ಕುರುಡಾಯಿತು. ಅದಕ್ಕೆ ಆ ಡಾಕ್ಟ್ರೇ ಕಾರಣ ಎಂದು ಬೈದುಕೊಂಡೇ ಇರುತ್ತಿದ್ದ. ಹೀಗಿರು ವಾಗ ಅವನ ಇನ್ನೊಂದು ಕಣ್ಣಿಗೂ ದೋಷ ಬಂತು. ಆಗ ರೋಗಿ ಕಣ್ಣು ಬಿಟ್ಟ.

ಅದೇ ಡಾಕ್ಟ್ರ ಬಳಿಗೆ ಬಂದು ಸರಿಮಾಡುವಂತೆ ಕೇಳಿಕೊಂಡ. "ಈಗಾಗ್ಲೆ ಒಂದು ಕಣ್ಣು ಊನವಾಯ್ತು, ಅದು ನನ್ನ ದೋಷ ಇದ್ದರೂ ಇರಬಹುದು. ಒಂದು ಸಾರಿ ಹಂಗಾದ ಮೇಲೆ ಏನೂ ಅನುಮಾನ ಇರೋದು ಸರಿ. ಇನ್ನೊಂದು ಸಾರೀನೂ ಹಿಂಗಾದ್ರೆ ಎರಡೂ ಕಣ್ಣು ಕೆಡಿಸಿಟ್ಟ ಅನ್ನೋ ಕೆಟ್ಟ ಹೆಸರು ನನಗೆ, ಬೇಕಾದ್ರೆ ನಾನು ಕಾಗದ ಕೊಡ್ತೀನಿ ಅಲ್ಲಿಗೆ ಹೋಗು ಅವರೇ ಸರಿ ಮಾಡ್ತಾರೆ", ಅಂದರು ಡಾಕ್ಟ್ರು. "ಇಲ್ಲ ಸ್ವಾಮಿ ನಾನು ತಪ್ಪು ಮಾಡಿದೆ, ಈಗ ನೀವೇ ಆಪರೇಷನ್ ಮಾಡಿ, ಅಕಸ್ಮಾತ್ ಕಣ್ಣು ಹೋದರೂ ಅದು ನನ್ನ ತಪ್ಪಿಗೆ ಶಿಕ್ಷೆ ಅಂದುಕೊಂಡು ಸಂತೋಷ ವಾಗಿ ಅನುಭವಿಸ್ತೀನಿ" ಅಂತ ಪಟ್ಟು ಹಿಡಿದ. ಸರಿ ಆಪರೇಷನ್ ಆಯಿತು. ರೋಗಿಯ ಎರಡು ಕಣ್ಣುಗಳಲ್ಲಿ ಒಂದಾದರೂ **ಉಳೀತು.**

ಹೀಗೆ ಎರಡು ಕಣ್ಣುಗಳಲ್ಲಿ ಒಂದನ್ನು ಕಳೆದುಕೊಂಡ ರೋಗಿ ಲಿಂಗಾಯಿತನೂ, ಒಂದಾದರೂ ಕಣ್ಣು ಉಳಿಸಿದ ಡಾಕ್ಟ್ರು ದಲಿತನೂ ಆಗಿದ್ದಾರೆ, ಆ ಕಣ್ಣಿನ ಡಾಕ್ಟ್ರೇ ನಮ್ಮ ನಡುವಿನ ಶಾಸಕ ಡಾ|| ತಿಪ್ಪೇಸ್ವಾಮಿ.

ಸುಮಾರು ವರ್ಷಗಳ ನಂತರ ಇದೇ ಘಟನೆ ರಿಪೀಟ್ ಆಗಿದೆ. ಆದರೆ ಈ ಬಾರಿ ಡಾಕ್ಟ್ರು ಆಪರೇಷನ್ ಮಾಡಿದ್ದು ಒಬ್ಬ ರೋಗಿಗೆ ಮಾತ್ರ ಅಲ್ಲ ಇಡೀ ಒಂದು ಜನಾಂಗಕ್ಕೇನೆ. ಒಂದು ರಾಷ್ಟ್ರಕ್ಕೆ. ಬೆಂಡಿಗೇರಿಯ ಲಿಂಗಾಯಿತರು ತಮ್ಮ ಎರಡೂ ಕಣ್ಣು ಏಕಕಾಲಕ್ಕೆ ಕಳೆದುಕೊಳ್ಳುವ ದುರಂತದಲ್ಲಿದ್ದಾಗ ಅಲ್ಲಿಗೆ ಹೋಗಿ ಉಳಿಸಿದವರು ತಿಪ್ಪೇಸ್ವಾಮಿ. ಆ ರೋಗಿಗಳಿಗೆ ನೀವು ರೋಗಿಗಳು ನಿಮಗೆ ಶಿಕ್ಷೆ ಅನ್ನೋ ಟ್ರೀಟ್‌ಮೆಂಟ್ ಆಗಬೇಕೆಂದು ದಿಟ್ಟವಾಗಿ ಶಿಫಾರಸ್ಸು ಮಾಡಿದವರು ಇವರು. ಆ ಮೂಲಕ ಕಣ್ಣುಕಳೆದುಕೊಳ್ಳಲಿದ್ದ ಅನೇಕರ ಕಣ್ಣನ್ನೂ ತೆರೆಸಿದರು.

ಘಟನೆ ಜರುಗಿ ನಾಲ್ಕು ತಿಂಗಳಾದರೂ ತುಟಿ ಪಿಟಕ್ಕನ್ನದಿದ್ದ ಗೌರಾವಾನ್ವಿತ ಭಾರತೀಯರು ಬಾಯಿ ತೆರೆಯುವಂತೆ ಮಾಡಿದ್ದು ತಿಪ್ಪೇಸ್ವಾಮಿಯವರು ಸರ್ಕಾರಕ್ಕೆ ಕೊಟ್ಟ ವರದಿ. ಹೀಗೆ ಸ್ವಲ್ಪ ಸ್ವಲ್ಪವೇ ತೆರೆಯತೊಡಗಿದ ಕಣ್ಣುಗಳು ಪೂರ್ತಿ ತೆರೆದಿದ್ದು ದ.ಸಂ.ಸ. ನಡೆಸಿದ ಬೃಹತ್ ರ್‍ಯಾಲಿಯ ದಿನದಂದು.

ಅಂದು ಬೆಂಗಳೂರಿಗೆ ಬಂದವರಲ್ಲಿ ಬಹುಪಾಲು ಹಳ್ಳಿಗಾಡಿ ನವರು, ತಲೆಯ ಮೇಲೆ ಬುತ್ತಿಗಂಟು-ಕಂಕುಳಲ್ಲಿ ಕೂಸು ಹೊತ್ತು ಬಂದ ತಾಯಂದಿರು, ಹೊಟ್ಟೆಯೊಳಗೆ ಕೂಸಿಟ್ಟುಕೊಂಡ ಬಸುರಿ ಯರು. ಊರುಗೋಲು ಹಿಡಿದ ಮುದುಕ-ಮುದುಕಿಯರು. ಮೀಸೆ ಮೂಡುತ್ತಿರುವ ಯುವಕರು....ಹೀಗೆ ಸಂಕಷ್ಟಗಳ ಸಂಗಮವೇ ಅಲ್ಲಿತ್ತು. ದಾರಿದ್ರ್ಯದ ದವಡೆಯಲ್ಲಿ ಅವಮಾನದ ಕುಲುಮೆಯಲ್ಲಿ ಬೆಂದ ಬತ್ತಿದ ಮುಖ, ಎಣ್ಣೆಕಾಣದ ತಲೆ ಅವರ ಆಸ್ತಿ. ಅವರ ಗುಳಿಬಿದ್ದ ಕಣ್ಣುಗಳಲ್ಲಿ ಬದುಕುಳಿದ ಪ್ರೀತಿ, ಮಾನವತೆ ಎಲ್ಲಕ್ಕಿಂತ ದೊಡ್ಡ ಆಸ್ತಿ. ಇಂತಹ ದೊಡ್ಡ ಆಸ್ತಿಯ ಯಜಮಾನಿಕೆ ವಹಿಸಿ ಕೊಂಡಿರುವ ದ.ಸಂ.ಸ. ಎಂದಿಗಿಂತ ಇಂದು ಹೆಚ್ಚು ಎಚ್ಚರದ ಹೆಜ್ಜೆ ಇಡಬೇಕಿದೆ. ಪ್ರತಿ ಹೆಜ್ಜೆಗೂ ಆ ಚಿಂದಿ ಅರಿವೆಯ, ಗುಳಿಬಿದ್ದ ಕಣ್ಣುಗಳಲ್ಲಿನ ಜ್ಯೋತಿಯನ್ನು ಮುಂದು ಮಾಡಿಕೊಳ್ಳ ಬೇಕಿದೆ. ದಲಿತ ಮನಸ್ಸು ಇತಿಹಾಸದಲ್ಲಿ ತನ್ನದೇ ಆದ ಮನಸ್ಸನ್ನು ಎಂದೂ, ಎಲ್ಲೂ ಈ ಪ್ರಮಾಣದಲ್ಲಿ ನಂಬಿದ ಉದಾ

ವರಸೆ ಇಲ್ಲ. ಚರಿತ್ರೆಯಲ್ಲಿ ದ.ಸಂ.ಸ.ದಂತಹ ಸಂಘಟನೆಯೂ ಹುಟ್ಟಿಲ್ಲ. 12ನೇ ಶತಮಾನದಲ್ಲಿ ಆದ ಇದುವರೆವಿಗೂ ಭೂಗೋಳದ ಯಾವ ಭೂಭಾಗವೂ ಕಾಣದ ಅಪರೂಪದ ಚಳುವಳಿಯ ಪರಿಕಾರರೇ ಇಂದು ಬೆಂಡಿಗೇರಿಯಲ್ಲಿ ಮಲತಿನ್ನಿಸಿರುವುದು. ತಿನ್ನಿಸಿದ್ದ ಕಂ.ಾ. ಕೇಳಿಯೂ ಸುಮ್ಮನಿದ್ದ ಸಾಂಸ್ಕೃತಿಕ ಎಚ್ಚರದ ಪ್ರಗತಿಪರ. ಒಂದಾಯ. ದಲಿತ ಇತ್ಯಾದಿ ಬಣಗಳ ರಕ್ತದಲ್ಲೂ ಮೇಲಿನ ದೋಷ ಇದ್ದೇ ಇದೆ.

ಮಲ ತಿನ್ನಿಸಿದರೆಂದು ದಲಿತರೇ ಪ್ರತಿಭಟಿಸಬೇಕಾದ ದೌರ್ಭಾಗ್ಯ ಕಂಡು ಇಂಡಿಯಾದ ಮನಸ್ಸು ಪ್ರಾಯಶ್ಚಿತ್ತದಲ್ಲಿ ನರಳುತ್ತಿಲ್ಲ. ಇದು ಒಂದು ಜನಾಂಗದ ನೈತಿಕತೆ ಛಿದ್ರವಾಗಿರುವುದರ ಸೂಚನೆ. "ಮಲ ತಿನ್ನಿಸಿದ ಮೇಲುಜಾತಿ ಮನಸ್ಸು ಗಲೀಜಾಗಿದೆ ಅದನ್ನೂ ಗುಡಿಸಿ, ತೊಳೆದು ಸ್ವಚ್ಛಗೊಳಿಸಬೇಕಾದ ಜವಾಬ್ದಾರಿ ನಮ್ಮ ಮೇಲಿದೆ" ಎಂದು ಮುಂದಾಗುವುದು ಒಂದು ಜನಾಂಗದ ನೈತಿಕ ಜೀವಂತಿಕೆಯ ಲಕ್ಷಣ.

ಡಾ॥ ತಿಪ್ಪೇಸ್ವಾಮಿಯವರ ಬದಲಿಗೆ ತಾನೊಬ್ಬ ಮಾನವತಾವಾದಿ ಎಂ. ಎನ್. ರಾಯ್‌ರ ಪರಿಕಾರ ಅಂದುಕೊಳ್ಳುವ ಎಸ್. ಆರ್. ಬೊಮ್ಮಾಯಿಯವರೇ ಈ ಕೆಲಸ ಮಾಡಬಹುದಿತ್ತು. ಹಾಗೆ ಮಾಡದೆ ಹೋದದ್ದು ಕೇವಲ ಅವರ ಮಿತಿಯಷ್ಟೇ ಆಗಿರದೆ ಒಂದು ಜನಾಂಗದ ನೈತಿಕತೆ ಆ ಪ್ರಮಾಣದಲ್ಲಿ ಕುಸಿದು ಕುಲಾಕರ್ಮ ಆಗಿರುವುದರ ಸಂಕೇತ.

ಇಂಥದ್ದರ ಹೊಟ್ಟೆಯಲ್ಲೂ ಜೀವ ಆಡುವ ಸಾಧ್ಯತೆ ಇಲ್ಲದಿಲ್ಲ. "ಪಂಚಮ"ದ ಹಿಂದಿನ ಸಂಚಿಕೆ ಅಚ್ಚಿನಲ್ಲಿತ್ತು. ಅಲ್ಲೊಬ್ಬ ಮರಿಮಲ್ಲಪ್ಪ ಅನ್ನುವ 70 ವರ್ಷದ ಮುದುಕಪ್ಪ ಪ್ರೂಫ್ ರೀಡರ್. ತಿಪ್ಪೇಸ್ವಾಮಿ ವರದಿಯ ಪ್ರೂಫ್ ತಿದ್ದುತ್ತಾ ಇದ್ದ ಆತ "ನನ್ನ ಸರ್ವೀಸ್ನಲ್ಲಿ ನಾನೆಲ್ಲೂ ಇಂಥ ಹಲ್ಕಾ ಸೂಳೇ ಮಕ್ಕಳ್ನ ನೋಡಿಲ್ಲ ಬಿಡಿ" ನಾನೂ ಅದೇ ಜಾತಿಯವನೇ. ಅವರದೋ 300–400 ಮನೆ ಇವರದು 10 ಮನೆ. ಪಾಪ ತಿನ್ನೋವಾಗ ಆ ಜೀವಗಳು ಎಷ್ಟು ನೊಂದಿರಬೇಕು. ಅರಸು ಇವರನ್ನೆಲ್ಲಾ ತುಳಿದಿಟ್ಟಿದ್ದ. ಈಗ ಬಾಲ ಬಿಚ್ತಾ ಅವರೆ. ಬೀದೀಲಿ ನಿಲ್ಸಿ ಕ್ಯಾಕರಿಸಿ ಉಗೀಬೇಕು. ಹತ್ತು ಮನೆಯವರು ಅವ್ರೆ ಏನಂತೆ. ಎದ್ದು ನಿಂತರೆ ಆವಾಗ ಏನ್ಮಾಡ್ತಾರೆ" ಅನ್ತಾ ತನ್ನ ಹೊಟ್ಟೆಯೊಳಗಿನ ಕಸಿವಿಸಿ ಹೊರ ಹಾಕಿದ. ಇಂಥವರ ಸಂಖ್ಯೆ ಹೆಚ್ಚಿದಷ್ಟೂ ಒಂದಾದರೂ ಕಣ್ಣು ಉಳಿಸಿಕೊಳ್ಳುವುದು ಹೆಚ್ಚಬಲ್ಲದು.

ಹಾಗೇನೆ ಏಳು ತಿಂಗಳು ಕಾಲ ಕಣ್ಣು, ಕಿವಿ, ಬಾಯಿ ಹೊಲಿಕೊಂಡಿದ್ದ ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಡೆ ಹುಬ್ಬಳ್ಳಿಯ ಭೋವಿ ಜನಾಂಗದ ಸಮ್ಮೇಳನದಲ್ಲಿ "ಸುಸಂಸ್ಕೃತ ಸಮಾಜ ತಲೆತಗ್ಗಿಸಬೇಕು" ಎಂದಿರುವುದು ಇನ್ನಷ್ಟು ಘೋರ. ಈ ಮುಂಚೆ ಹೆಗಡೆಯವರ ಇದೇ ಕಣ್ಣು. ಇದೇ ಬಾಯಿಗಳಿಂದ "ಉತ್ತರ ಪ್ರದೇಶ, ಬಿಹಾರಗಳಲ್ಲಿ ದಲಿತರನ್ನು ಕೊಚ್ಚಿ ಹಾಕಲಾಗುತ್ತಿದೆ. ಅದಕ್ಕೆ ಹೋಲಿಸಿದರೆ ಕರ್ನಾಟಕ ಎಷ್ಟೋ ಮೇಲು" ಎಂಬ ಆಣಿಮುತ್ತು ಉದುರಿತ್ತು. ಅದನ್ನು ಕಿವಿ ನೆಟ್ಟಗಿರುವ ಯಾರೂ ಮರೆತಿರಲಾರರು. ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ದಲಿತರಲ್ಲಿನ ಒಳ ಜಾತಿಗಳನ್ನು ಒಡೆಯುವ ಮಾತಾಡಿದ್ದಾರೆ. ಇದು ಅವರ ರಕ್ತದ ಗುಣ. ದ.ಸಂ.ಸ. ಇಂಥದ್ದನ್ನೂ ಅರಗಿಸಿಕೊಳ್ಳುವ ವಿವೇಕ ಉಳಿಸಿಕೊಳ್ಳಬಲ್ಲದು.

ಸೊರಬ ತಾಲೂಕಿನ ತತ್ತೂರಿನಲ್ಲಿ ದಲಿತ ಚಂದ್ರಪ್ಪನಿಗೆ ಮಲದ ಚಪ್ಪಲಿ ಬಾಯಲ್ಲಿಟ್ಟು ದೌರ್ಜನ್ಯ ನಡೆಸಿದ ಮತ್ತೊಂದು ಘೋರ ಸುದ್ದಿ ವರದಿಯಾಗಿದೆ. ಒಂದು ಗಾಯ ಆರುವ ಮುನ್ನವೇ ಇನ್ನೊಂದು ಬರೆ. ಈ ನೋವಿನಲ್ಲೂ ಹೆಗಡೆಯವರ "ಮಲ ತಿನ್ನಿಸಿದವರಿಗೆ ಪೊಲೀಸರ ನೆರವಿನಿಂದ ಮಲ ತಿನ್ನಿಸುವ" ವೀರಾವೇಶದ ಮಾತನ್ನು ಸಂಯಮದಿಂದ ನೋಡಬೇಕಿದೆ. ನಮಗೆ ಬೇಕಿರುವುದು ಮನುಷ್ಯ ಮನುಷ್ಯನಿಗೆ ಮಲ ತಿನ್ನಿಸದಿರುವಂಥ ಒಂದು ವಾತಾವರಣ. ಬೆಂಡಿಗೇರಿಯಂಥ ಘಟನೆಗಳು ಮರುಕಳಿಸದಿರುವಂತಹ ಸಾಮಾಜಿಕ ಸ್ವಾಸ್ಥ್ಯ. ಅದಕ್ಕೆ ಸರ್ಕಾರ ತನ್ನೆಲ್ಲ ಶಕ್ತಿಯನ್ನು ಬಳಸಬೇಕು. ತಪ್ಪಿತಸ್ಥರಿಗೆ ಸಜೆ ವಿಧಿಸಬೇಕು. ದಲಿತರ ಮೇಲಿನ ಯಾವುದೇ ದೌರ್ಜನ್ಯಕ್ಕೂ ಉಗ್ರ ಶಿಕ್ಷೆ ಜಾರಿಗೊಳಿಸಬೇಕು. ಮೇಲು ಜಾತಿಯ ಮನಸ್ಸಿನಲ್ಲಿ ಬೇರು ಬಿಟ್ಟ ಜಾತಿವಿಷ ಬೇರುಗಳನ್ನು ನಿರ್ನಾಮ ಮಾಡಲು ತನ್ನೆಲ್ಲ ಮಾಧ್ಯಮಗಳನ್ನು ಬಳಸಬೇಕೇ ಹೊರತು ಮಲ ತಿನ್ನಿಸಬೇಕಿಲ್ಲ.

ಕೊನೆಯದಾಗಿ ಈ ಹೊತ್ನಲ್ಲಿ ದ.ಸಂ.ಸ. ದಲಿತರ ಅನಾದಿ ಕಾಲದ ನಂಬಿಕೆಗಳನ್ನೂ ಬದಲು ಮಾಡುತ್ತಿದೆ. ಎಚ್ಚರ ತಪ್ಪಿ ಅವರ ನಂಬಿಕೆ ಮುಕ್ಕಾದರೆ ಬೆಂಡಿಗೇರಿಯಲ್ಲಿ ಮಲತಿನ್ನಿಸಿದ ಮನಸ್ಸಿನವರೂ. ಗೋಡ್ಸೆ. ಹಿಟ್ಲರ್‌ಗಳೂ ನಮ್ಮಲ್ಲೇ ಹುಟ್ಟಿಕೊಳ್ಳುವರು. ಹಾಗೆ ಆಗುವುದಿಲ್ಲ ಅನ್ನುವ ಗ್ಯಾರಂಟಿಯೇನೂ ಇತಿಹಾಸದಲ್ಲಿ ಇಲ್ಲ. ರ‍್ಯಾಲಿಯ ದಿನ ಬಂದವರು ಬೆಂಡಿಗೇರಿಯಲ್ಲಿ ನಮ್ಮವರಿಗೆ ಮಲ ತಿನ್ನಿಸಿದ್ದಾರೆ ಅನ್ನುವುದರ ಜತೆಗೆ "ಸಂಘದೋರು ಹೇಳ್ಯಾರ್ರಿ ಬಂದೀವ್ರಿ" ಅನ್ನುವ ನಂಬಿಕೆಯಿಂದ. ಈ ನಿಜ ಮತ್ತು ಈ ನಂಬಿಕೆ ಮಾತ್ರ ನಮ್ಮನ್ನು ಕಾಯಬಲ್ಲದು.

–ಸಂಪಾದಕ

(1ನೇ ಪುಟದಿಂದ)

ಬೆಂಗಳೂರಿನ ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ ಆರಂಭವಾಗಬೇಕಿತ್ತು. ಮಾಗಿಯ ಚಳಿಗೆ ಮುದುರಿ ಹೋಗಿದ್ದ, ಮುಂಜಾನೆಯ ತಂಗಾಳಿಗೆ ಹಣ್ಣೆಲೆ ಉದುರಿಸತೊಡಗಿದ್ದ ಚಿಕ್ಕಲಾಲ್‌ಬಾಗಿನ ತುಂಬ ನಡೆದಾಡುವ ಚಿಗುರೆಲೆಗಳು. ಬಣ್ಣ ಬಣ್ಣದ ಹೂವುಗಳು. ಬಸ್ಸು ಕಾರುಗಳ ಯಾಂತ್ರಿಕ ಗದ್ದಲವನ್ನು ಮೀರಿ ಕೇಳಿಬರುತ್ತಿದ್ದ ಜನಪದ ಹಾಡುಗಳು. ನಡುನಡುವೆ ಗಗನ ಭೇದಿಸುವ ತಮಟೆಯ ಸದ್ದು. ಘೋಷಣೆ ಧಿಕ್ಕಾರಗಳ ಕೂಗು. ಜಾತಿಯ ಗೋಡೆಯೊಳಗೆ ಕುಬ್ಜರಾದವರ ಜಾಗೃತಿಗಾಗಿ–ಅವರ ಬಂಧ ವಿಮೋಚನೆಗಾಗಿ ಹೃದಯಪೂರ್ತರ ಹೆಜ್ಜೆಗಳು.

ನಸುಕು ಹರಿಯುವ ಮುನ್ನವೇ ಆರಂಭವಾದ ದಲಿತರ ಪ್ರವಾಹ ಇನ್ನೂ ಮುಗಿದಿರಲೇ ಇಲ್ಲ. ನಿಗದಿತ ಅವಧಿಗೆ ಕೊಂಚ ತಡವಾಗಿಯೇ ಮೆರವಣಿಗೆ ಆರಂಭವಾಯಿತು. ಚಿಕ್ಕ ಲಾಲ್‌ಬಾಗಿನ ಗಿಡಮರ ಬಳ್ಳಿಗಳೊಂದಿಗೆ ಬೆರೆತುಹೋಗಿದ್ದ ಜನ ಈಗ ಬಣಗುಡುವ ಡಾಂಬರು ರಸ್ತೆಗೆ ಬರತೊಡಗಿದರು.

ಒಂದೆರಡು ತಿಂಗಳ ಹಿಂದಷ್ಟೇ ಹಡೆದ ಮಗುವನ್ನು ಎತ್ತಿಕೊಂಡು ಉರಿಬಿಸಿಲಿನಲ್ಲಿದ್ದ ಮಹಿಳೆಯೊಬ್ಬರನ್ನು ನೆರಳಿಗೆ ಕರೆದೊಯ್ಯಲು ದ.ಸಂ.ಸ. ಕಾರ್ಯಕರ್ತರು ಹೆಣಗುತ್ತಿದ್ದರು. ಮೊದಮೊದಲು ಒಪ್ಪದಿದ್ದ ಆಕೆ ಕೊನೆಗೆ ಒಪ್ಪಿ ಮಗುವಿನೊಂದಿಗೆ ನೆರಳಿನತ್ತ ತೆರಳಿದಳು. ನೆತ್ತಿಯ ಮೇಲೆ ಬುತ್ತಿಯ ಗಂಟು, ಕಂಕುಳಲ್ಲಿ ಎಳೆಮಗು. ಬಸುರಿಯರು. ಮುದುಕಿಯರು. ಈಗಷ್ಟೇ ಹರೆಯಕ್ಕೆ ಕಾಲಿಟ್ಟ ಕಪ್ಪು ಗುಲಾಬಿ ಚೆಲುವೆಯರು, ಮೆರವಣಿಗೆ ನಡುನಡುವೆ ಚೆಲ್ಲಿಕೊಂಡು ಚೈತನ್ಯವಾಗಿದ್ದರು. ದ.ಸಂ.ಸ. ಕಾರ್ಯಕ್ರಮವೊಂದರಲ್ಲಿ ಇಷ್ಟೊಂದು ಮಹಿಳೆಯರು ಭಾಗವಹಿಸಿದ್ದು ಇದೇ ಮೊದಲಿರಬೇಕು.

ಮೆರವಣಿಗೆ ಆರಂಭವಾದದ್ದು ಬೆಳೆಯುತ್ತಲೇ ಹೋಯಿತು. ಈಗ ಮುಗಿಯುತ್ತದೆ–ಆಗ ಮುಗಿಯುತ್ತದೆ ಅಂದರೆ ಅದು ಬೆಳೆಯುತ್ತಲೇ ಇದೆ. ಸುಮಾರು 3 ಕಿ.ಮೀ. ಉದ್ದದ ದಲಿತ ಜನ ಸಮುದಾಯದ ಆ ಮೆರವಣಿಗೆ ಬೆಂಗಳೂರಿನ ಜನಕ್ಕೆ ಆಶ್ಚರ್ಯ ಹಾಗೂ ಆತಂಕ ಎರಡನ್ನೂ ಮೂಡಿಸಿತ್ತು. ಸೂಪರ್ ಟಾಕೀಸಿನ ಇಕ್ಕಟ್ಟಾದ ರಸ್ತೆಯಲ್ಲಿ ಮೆರವಣಿಗೆ ಹೊರಟಾಗ ಇಕ್ಕೆಲಗಳಲ್ಲಿ ಜನ ಮಹಡಿಗಳ ಮೇಲೆ, ಮಾಡುಗಳ ಮೇಲೆ ನಿಂತು ದಂಗಾಗಿ ನೋಡುತ್ತಿದ್ದರು. ಅವರ ಮುಖದಲ್ಲಿ ಒಂದೇ ಪ್ರಶ್ನೆ. ಇದು ಯಾರ ಮೆರವಣಿಗೆ?, ಇದು ಎಂತಹ ಮೆರವಣಿಗೆ? ಹತ್ತಿರ ಬಂದು ವಿಚಾರಿಸುವುದನ್ನೂ ಮರೆತು ಬಿಟ್ಟ ಬಾಯಿ ಬಿಟ್ಟೇ ನೋಡುತ್ತಿದ್ದರು. ಸೂಪರ್ ಟಾಕೀಸ್ ಹತ್ತಿರ ಒಬ್ಬರು ಪಂಚೆ ವ್ಯಕ್ತಿ ಕಾರ್ಯಕರ್ತರಿಂದ ಕರಪತ್ರ ಪಡೆದು ಒಂದು ನಿಮಿಷ ನಿಂತು ಓದಿದರು. ವಿಷಯ ಎದೆಗಿಳಿದದ್ದೇ "ಛೇ ಛೇ ಹಿಂಗಾಗಿದೆಯಾ" ಎಂದು ಗಟ್ಟಿಯಾಗಿ ಉದ್ಗರಿಸಿ ಪಾಕರಿಸಿದರು.

ಮುಂದೆ ಮೆರವಣಿಗೆ ಸಿಟಿ ಮಾರ್ಕೆಟ್ ಮುಂದೆ ಹಾಯುತ್ತಿರುವಾಗ ಮಾರ್ಕೆಟ್ಟಿಗೆ ಬಂದಿದ್ದ ಜನ ಅಪಾರ ಜನಸ್ತೋಮವನ್ನು ಕಂಡು ರಸ್ತೆಯ ಇಕ್ಕೆಲಗಳಲ್ಲಿ ಘೇರಾಯಿಸಿದರು. ಪರಸ್ಪರ "ಏನಿದು ? ಯಾರದು ?" ವಿಚಾರಿಸಿಕೊಳ್ಳುತ್ತಿದ್ದರು. ಮಸೀದಿಯ ಬಳಿ ಒಂದು ಉದ್ಗಾರ "ಏ ಕ್ಯಾರೆ, ಇತನಾ ಲೋಗ್ ಐಸ ಜಾತಾಹೈ". ಕರಪತ್ರ ಸಿಕ್ಕ ಕೆಲವರು ಓದಿ ಕ್ಷಣ ದಿಗ್ಮೂಢರಾಗಿ, ಮೌನವಾಗಿ ತಲೆ ತಗ್ಗಿಸಿ ನಡೆದು ಹೋಗುತ್ತಿದ್ದರು. ಕೆಲವರು ಹಿಂದಿನಿಂದ ಮುಂದಕ್ಕೆ ಮೆರವಣಿಗೆ ನೋಡಲು ಧಾವಿಸುತ್ತಿದ್ದರು. ಮೆರವಣಿಗೆಯ ಮೋಡಿಗೆ ಸಿಕ್ಕಿ ಅನೇಕರು ಆ ಕ್ಷಣದ ಕೆಲಸವನ್ನು ಮರೆತು ನೋಡುತ್ತಿದ್ದರು. ವಾಹನ ಸಂಚಾರ ಸ್ಥಗಿತಗೊಂಡು ಅಡಚಣೆಯಾದಾಗ ಸ್ಕೂಟರ್, ಕಾರು. ರಿಕ್ಷಾ ಚಾಲಕರು ಸಿಡಿಮಿಡಿಗೊಳ್ಳದೆ ಕೌತುಕದ ಕಣ್ಣಿಂದ ಮೆರವಣಿಗೆ ಮರೆಯಾಗಿ ದಾರಿ ಸುಗಮವಾಗುವವರೆಗೂ ನಿರೀಕ್ಷಿಸುತ್ತಾ ನಿಲ್ಲುತ್ತಿದ್ದರು.

ಮೆರವಣಿಗೆ ಕಾರ್ಪೊರೇಷನ್ ಮುಂಭಾಗದಿಂದ ಮೈಸೂರು ಬ್ಯಾಂಕ್ ವೃತ್ತದ ಕಡೆ ನಡೆಯಿತು. ಅದಾಗಲೇ ಸಾಲು ಸಾಲುಗಳಲ್ಲಿದ್ದ ಸಾವಿರಾರು ಜನ ಕೆಂಪೇಗೌಡ ರಸ್ತೆಯಲ್ಲಿ ರಸ್ತೆ ಭರ್ತಿ ಕಲಸಿಹೋಗಿ ನಡೆಯತೊಡಗಿದ್ದರು. ಕೋರ್ಟಿನ ಕಾಂಪೌಂಡ್ ಮುಂಭಾಗದಲ್ಲಿ ನಿಂತಿದ್ದ ಲಾಯರೊಬ್ಬರು "ಎಷ್ಟೊಂದ್ ಜನ ಎಲ್ಲಾ ಬಡವರೆ" ಎಂದು ತಮ್ಮ ಜೊತೆಗಾರರೊಂದಿಗೆ ಹೇಳುತ್ತಿದ್ದರು. "ನೋಡಿ ಈ ಜನಕ್ಕೆ ಕಾಲಿಗೆ ಚಪ್ಪಲಿ ಇಲ್ಲ. ಎಷ್ಟೊಂದು ಹೆಂಗಸರು ಯುವಕರು ಮುನ್ನುಗ್ಗುತ್ತಿದ್ದಾರೆ." ಜತೆಗಾರರು ದನಿಗೂಡಿಸಿದರು. ವಿಷಯ ಕೇಳಿದ ಆಟೋ ಡ್ರೈವರ್ ಒಬ್ಬರು "ಹೌದಾ ಅದೆಂಗ್ ತಿನ್ನಿಸಿದರು. ಇವರಾದ್ರು ರಿವರ್ಸ್ ಹೊಡೀಬೇಕಿತ್ತಲ್ಲ. ಇಷ್ಟೊಂದು ಮುಂದುವರಿದ ಈ ಕಾಲ್‌ದಾಗೂ ಇದೆಲ್ಲ ನಡೀತದಾ" ಎಂದು ತಮ್ಮ ಆತಂಕ ವ್ಯಕ್ತಪಡಿಸಿದರು.

ವಾಹನಗಳಿಂದ ತುಂಬಿ ಹೋಗಿದ್ದ ಬೆಂಗಳೂರಿನ ಬೀದಿಗಳು ದ. ಸಂ. ಸ.ದ ನೀಲಿ ಬಾವುಟಗಳಿಂದ, ಆಯಾ ಪ್ರದೇಶದ ಬ್ಯಾನರ್‌ಗಳಿಂದ ತುಂಬಿಹೋಗಿದ್ದವು. ಮೆರವಣಿಗೆ ಉದ್ದಕ್ಕೂ ಹಾಡುಗಳು, ತಮಟೆ ಸದ್ದು, ಘೋಷಣೆಗಳು ತುಂಬಿದ್ದು ಇಡೀ ವಾತಾವರಣಕ್ಕೆ ಹೊಸ ಕಳೆ ಬಂದಿತ್ತು. ದಲಿತರ ಇಂತಹ ಪ್ರಚಂಡ ಮೆರವಣಿಗೆಯನ್ನು ನಿರೀಕ್ಷಿಸಿರದಿದ್ದ ಪತ್ರಕರ್ತರಂತೂ ಬೆಕ್ಕಸ ಬೆರಗಾಗಿದ್ದರು. ಬೆಂಡಿಗೇರಿಯಲ್ಲಿ ಮಲ ತಿನ್ನುವ ದೌರ್ಜನ್ಯಕ್ಕೆ ಒಳಗಾಗಿದ್ದ ಅವಮಾನಿತ ದಲಿತರು ಮೆರವಣಿಗೆಯ ಮುಂಚೂಣಿಯಲ್ಲಿದ್ದರು. ಅವರೊಂದಿಗೆ ದ. ಸಂ. ಸ. ರಾಜ್ಯ ಸಂಚಾಲಕರಾದ ಬಿ. ವಿ. ಚಂದ್ರಪ್ರಸಾದ್ ತ್ಯಾಗಿ. ಹಾಗೂ ಮುಖಂಡರಾದ ಪ್ರೊ॥ ಬಿ. ಕೃಷ್ಣಪ್ಪ, ಎನ್. ವೆಂಕಟೇಶ್, ಎಂ. ಡಿ. ಗಂಗಯ್ಯ ಮುಂತಾದವರು ಮೆರವಣಿಗೆಯನ್ನು ಮುನ್ನಡೆಸುತ್ತಿದ್ದರು.

ಬೀದಿ ಇಕ್ಕೆಲಗಳಲ್ಲಿ ಜನ ಮಹಡಿಗಳ ಮೇಲೆ, ಮಾಡುಗಳ ಮೇಲೆ ನಿಂತು ದಂಗಾಗಿ ನೋಡುತ್ತಿದ್ದರು. ಅವರ ಮುಖದಲ್ಲಿ ಒಂದೇ ಪ್ರಶ್ನೆ ಇದು ಯಾರ ಮೆರವಣಿಗೆ? ಇದು ಎಂತಹ ಮೆರವಣಿಗೆ ?

ಮೆರವಣಿಗೆಗೆಂದು ಬರಬೇಕೆಂದಿದ್ದವರು ಇನ್ನೂ ಬರುತ್ತಲೇ ಇದ್ದರು. ಜನ ಪ್ರವಾಹ ಹೆಚ್ಚಾದಂತೆಲ್ಲ ಸಾಲಾಗಿ ಬರುತ್ತಲೇ ಇದ್ದರು. ಮರಗಿಡ ಕಟ್ಟಡಗಳೊಂದಿಗೆ ಇಡೀ ನಗರವೇ ಚಲಿಸಿದಂತೆ, ನೊಂದ ಮಾನವ ಕುಲವೇ ಬೆಳಕಿನತ್ತ ಮುನ್ನಡೆದಂತೆ ಮೆರವಣಿಗೆ ಮುಂದುವರಿಯಿತು.

ಸಭೆ ನಡೆಯಬೇಕಾಗಿದ್ದ ಕಬ್ಬನ್ ಪಾರ್ಕನ್ನು ಮೆರವಣಿಗೆ ತಲುಪುವ ಹೊತ್ತಿಗಂತೂ ಜನಪ್ರವಾಹ ಉಕ್ಕಿ ಹರಿಯತೊಡಗಿತ್ತು, ವಿಶಾಲವಾದ ಕೆ. ಆರ್. ಸರ್ಕಲ್‌ನ ತುಂಬ ಅದರ ಹಿಂದೆ ಸೆಂಟ್ರಲ್ ಕಾಲೇಜ್ ಮೈಸೂರು ಬ್ಯಾಂಕ್‌ವರೆಗೆ ಜನವೋ ಜನ. ನೀಲಿ ಬಾವುಟಗಳು, ಬಿಳಿ ಕೆಂಪು ಬ್ಯಾನರ್‌ಗಳು ಕೈಯಲ್ಲಿ ಹಿಡಿದ ಫಲಕಗಳು. ಅದೊಂದು ವಿನೂತನ ನೋಟ. ಸಾವಿರಾರು ನದಿಗಳ ಸಂಗಮ. ಬಹುಶಃ ಬೆಂಗಳೂರು ಹಿಂದೆಂದೂ ನೋಡಿರದಷ್ಟು ದಲಿತರ ಪ್ರವಾಹ.

ಪ್ರತಿಭಟನಾ ಸಭೆ ನಡೆಯಬೇಕಾಗಿದ್ದ ಕಬ್ಬನ್ ಪಾರ್ಕಿನಲ್ಲಿ ಆಗಲೇ ಸಾಕಷ್ಟು ಮಂದಿ ನೆರೆದಿದ್ದರು. ತಡವಾಗಿ ಬಂದವರು ನೇರವಾಗಿ ಅಲ್ಲಿಗೇ ಬಂದಿದ್ದರು. ಮರಗಳ ನೆರಳಿನಲ್ಲಿ ಕುಳಿತು ದಣಿದವರು ಬುತ್ತಿಗಂಟು ಬಿಚ್ಚುತ್ತಿದ್ದರು. ಇಡೀ ಪಾರ್ಕಿನ ತುಂಬ ಎಣ್ಣೆ ಕಾಣದ ತಲೆಗಳ ಸಮಾಗಮ. ರಾತ್ರಿ ಇಡೀ ದೀರ್ಘ ಪ್ರಯಾಣದ ಬಳಲಿಕೆಯಿಂದ, ಶತಶತಮಾನದ ನೋವಿನ ಹೊರೆಯಿಂದ ಕ್ಷಣ ವಿರಮಿಸಿಕೊಳ್ಳಲು ಅರೆಬರೆ ನೆರಳಡಿ ನಿಸೂರನೆ ಕೂತರು. ಹಿಂದೊಮ್ಮೆ ರೈತರ ಪ್ರವಾಹವನ್ನು ಕಂಡು ಮೈತುಂಬಿಕೊಂಡಿದ್ದ ಕಬ್ಬನ್ ಪಾರ್ಕು ಇಂದು ಮನದುಂಬಿಸಿಕೊಂಡಿತ್ತು. ಪ್ರತಿ ಮರಗಿಡ ಬಳ್ಳಿಗಳೊಂದಿಗೂ ಪರಿಚಿತರಂತೆ ಪ್ರತಿಭಟನೆಗೆ ಬಂದಿದ್ದ ದಲಿತರು ಒಂದಾಗಿದ್ದರು. ಕೆಲವರು ಅಲ್ಲೇ ಕಾಲುಚಾಚಿ ದಣಿವಾರಿಸಿಕೊಂಡರೆ ಮಕ್ಕಳಿಗಂತೂ ಹಬ್ಬವೋ ಹಬ್ಬ. ಜನ ಸುಗ್ಗಿಯಲ್ಲಿ ಮೀಯುವ ಆನಂದ.

ಬೆಂಗಳೂರೆಂಬ ಮಾಯಾಂಗನೆಯನ್ನು ಕಾಣದವರಿಗೆ ಅದೊಂದು ಹೊಸ ಆವೇಶ, ಕನಸುಗಳ ಗೊಂಚಲು. ಈ ದಣಿವು, ಈ ಆಯಾಸ, ಈ ಕನಸುಗಳ ಗುಂಗಿನಿಂದ ನಿಜದ ನೆಲಕ್ಕೆ ತಂದದ್ದು ದಲಿತ ಕಲಾಮಂಡಲಿಯ ಹಾಡುಗಳು. ಕುಣಿತ. ಪಿಚ್ಚಳ್ಳಿ ಶ್ರೀನಿವಾಸ್ ಮತ್ತು ತಂಡದವರ ಉನ್ಮಾದದ ಹಾಡುಮೈಯಲ್ಲಿ ಹೊಸ ಚೈತನ್ಯದ ಸಂಚಾರ. ಅಳತೆಗೆ ಸಿಗದ ಆನಂದ. ನೋವಿನ ಎದೆಗಳಲ್ಲೂ ಸಮಾಧಾನದ ಜಿನುಗು.



ಮರ, ಗಿಡ, ಬಳ್ಳಿಗಳೊಂದಿಗೆ ಪರಿಚಿತರಂತೆ ಒಂದಾಗಿ ಹೋಗಿರುವ ದಲಿತರು

ನಿಗಧಿತ ಸಮಯಕ್ಕೆ ಸ್ವಲ್ಪ ಮೊದಲೇ ಸಭೆ ಆರಂಭವಾಯಿತು. ದಲಿತ ವಿದ್ಯಾರ್ಥಿ ಒಕ್ಕೂಟ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಜಗತ್ತಿನ ಈ ಘೋರ ಘಟನೆ ಕಂಡು ಸರ್ಕಾರ ಕಟ್ಟಿಕೊಂಡಿದ್ದ ಕಣ್ಣುಪಟ್ಟಿಯ ಗಂಟುಬಿಚ್ಚಿದರು. ಬಹಿರಂಗ ಸಭೆಯನ್ನು ಉದ್ಘಾಟಿಸಿದ ನಮ್ಮ ನಡುವಿನ ಉತ್ತಮ ಕಲಾವಿದರಲ್ಲಿ ಒಬ್ಬರಾದ ಕೆ. ಟಿ. ಶಿವಪ್ರಸಾದ್ ಅವರು "ಮಲ ತಿನ್ನಿಸಿ ರಾಕ್ಷಸರಾದವರನ್ನು ಮನುಷ್ಯರನ್ನಾಗಿ ಮಾಡುವ, ನಂಬಿಕೆ ನಮಗಿದೆ" ಎಂದು ಸ್ಪಷ್ಟಪಡಿಸಿದರು. "ಮಲ ತಿನ್ನಿಸಿದವರಿಗೆ ಶಿಕ್ಷೆ ನೀಡುವ ಮೂಲಕ ಮನುಷ್ಯರಾಗಿ" ಎಂದು ಸರ್ಕಾರವನ್ನು ಒತ್ತಾಯಿಸಿದರು. "ಬುದ್ಧ, ಬಸವ, ಅಂಬೇಡ್ಕರ್, ಗಾಂಧಿ, ಲೋಹಿಯಾರ ಜನ ನಾವು. ನಾವು ಮನುಷ್ಯರು. ಉಳಿದವರನ್ನೂ ಮನುಷ್ಯರನ್ನಾಗಿ ಮಾಡುತ್ತೇವೆ" ಎಂದು ದೃಢಪಡಿಸಿದರು.

ಡಾ॥ ಬಿ. ಆರ್. ಅಂಬೇಡ್ಕರ್ ಅವರ ವಿವಾದಾತ್ಮಕ ಕೃತಿಯಲ್ಲಿನ ನಿಷೇದಿತ ಭಾಗವಾದ "ರಾಮ ಮತ್ತು ಕೃಷ್ಣ" ಅಧ್ಯಾಯದ ಕನ್ನಡ ಅನುವಾದವನ್ನು ಬಿಡುಗಡೆ ಮಾಡಿದರು. ಪ್ರತಿಯೊಬ್ಬ ಪ್ರಜ್ಞಾವಂತರೂ ಈ ಕೃತಿಯನ್ನು ಓದಲೇಬೇಕೆಂದು ಒತ್ತಾಯಿಸಿದರು.

ದ.ಸಂ.ಸ. ಹಿರಿಯರೂ ಮುಖಂಡರೂ ಆದ ಪ್ರೊ॥ ಬಿ. ಕೃಷ್ಣಪ್ಪನವರು ಪ್ರತಿಭಟನೆಗೆ ಬಂದಿದ್ದ ಜನರನ್ನು ಸುಸಂಸ್ಕೃತ ಮನಸ್ಸಿನ ಮಹಾಚೇತನಗಳೆಂದು ಬಣ್ಣಿಸಿದರು. "ಬೆಂಡಿಗೇರಿ ಘಟನೆ ಗಿನ್ನೀಸ್ ದಾಖಲೆ ಸೇರುವಂತ ಹೇಯಕೃತ್ಯ. ಯಾವೊಬ್ಬ ಮಠಾಧಿಪತಿ, ಮೇಲ್ಜಾತಿಯ ವಿಭೂತಿ ಪುರುಷ ಇದನ್ನು ಖಂಡಿಸುವ ಚೈತನ್ಯ ತೋರಲಿಲ್ಲ" ಎಂದು ವಿಷಾದಿಸಿದ ಅವರು "ಹಿಂದೂಗಳು ಸಂತರಂತೆ ಮಾತಾಡುತ್ತಾರೆ, ಕಟುಕರಂತೆ ನಡೆದುಕೊಳ್ಳುತ್ತಾರೆ." ಎಂದು ಖಂಡಿಸಿದರು. ಯಾವುದೇ ಕಾನೂನು ಕ್ರಮ ಕೈಗೊಳ್ಳದಿರುವ

ಹಿಂದೂಗಳು ಸಂತರಂತೆ ಮಾತಾಡುತ್ತಾರೆ ಕಟುಕರಂತೆ ನಡೆದುಕೊಳ್ಳುತ್ತಾರೆ.

-ಪ್ರೊ। ಬಿ. ಕೃಷ್ಣಪ್ಪ

ಸರ್ಕಾರದ ನಿರ್ಲಕ್ಷ್ಯವನ್ನು ಕಂಡು ಕೆಂಡವಾದ ಅವರು "ಗೃಹಮಂತ್ರಿ ಜಾಲಪ್ಪನವರೇ ನಿಮಗೇ ಮಲ ತಿನ್ನಿಸಿದ್ದಿದ್ದರೆ ಏನು ಮಾಡುತ್ತಿದ್ದಿರಿ ?" ಎಂದು ಪ್ರಶ್ನಿಸಿದರು. ಈ ಅಕೃತ್ಯ ನಡೆಸಿದ ಸರ್ಕಾರಿ ನೌಕರರನ್ನು ಸಸ್ಪೆಂಡ್ ಮಾಡಿದರೆ ಸಾಲದು ಉಗ್ರ ಶಿಕ್ಷೆಯಾಗಬೇಕೆಂದು ಆಗ್ರಹಪಡಿಸಿದರು.

ನಂತರ ಮಾತನಾಡಿದ ಸಾಹಿತಿ ಕಲಾವಿದರ ಬಳಗದ ಸಂಚಾಲಕ ಡಾ॥ ಎಂ. ಚಿದಾನಂದ ಮೂರ್ತಿ "ಈ ಘಟನೆಯಲ್ಲಿ ಪಾಲುದಾರರಾದವರು ವೀರಶೈವ ಮತದಿಂದ ಭ್ರಷ್ಟರಾಗಿದ್ದಾರೆ. ಆ ಧರ್ಮದ ಆದರ್ಶಗಳನ್ನೆಲ್ಲ ಗಾಳಿಗೆ ತೂರಿದ್ದಾರೆ. ಅವರಿಗೆ ಬಸವಣ್ಣನ ಹೆಸರು ಎತ್ತುವುದಕ್ಕೂ ಹಕ್ಕಿಲ್ಲ. ರಾಕ್ಷಸರಾದ ಇವರಿಗೆ ಗಡೀಪಾರಿಗಿಂತ ಉಗ್ರಶಿಕ್ಷೆಯಾಗಬೇಕು" ಎಂದು ಉದ್ವೇಗದಿಂದ ಹೇಳಿದರು. ದಲಿತರ ಹೋರಾಟಕ್ಕೆ ಎಲ್ಲ ಕನ್ನಡಿಗರ ಹಾಗೂ ಪ್ರಜ್ಞಾವಂತರ ಬೆಂಬಲವಿದೆ ಎಂದು ಘೋಷಿಸಿದರು.


ಸಾಹಿತಿ ದೇವನೂರ ಮಹದೇವ "ಅವರು ಈ ಸರ್ಕಾರಕ್ಕೆ ಮಾನ ಮರ್ಯಾದೆ ಇದ್ದಿದ್ದರೆ ಈ ಪ್ರತಿಭಟನೆ ಅಗತ್ಯವಿರಲಿಲ್ಲ. ಮೊನ್ನೆ ನಡೆದ ಸರ್ಕಾರದ ವಿಜಯೋತ್ಸವವನ್ನು ಚರಿತ್ರೆ ಸುವರ್ಣಾಕ್ಷರಗಳಲ್ಲಿ ಬರೆಯುವುದಿಲ್ಲ. ಮಲದ ಅಕ್ಷರಗಳಲ್ಲಿ ಬರೆದಿಡುತ್ತದೆ" ಎಂದರು. ಮೇಲುಜಾತಿಯ ಮನಸ್ಸು ಈ ಪ್ರಮಾಣದಲ್ಲಿ ಕೊಚ್ಚೆಯಾಗಿರುವುದನ್ನು ಕಂಡು ಬೆಚ್ಚಿದ ಅವರು "ಮುಂದಿನ ಆಗಸ್ಟ್ 15ರಂದು ನಾವೆಲ್ಲ ನೆಲ ಗುಡಿಸುವ ಬದಲು ಮೇಲುಜಾತಿಯ ಕೊಳಕಿನ ಮನಸ್ಸುಗಳನ್ನು ಗುಡಿಸಲು ಮುಂದಾಗಬೇಕಿದೆ" ಎಂದು ಆಶಿಸಿದರು.

ಕವಿ ಸಿದ್ದಲಿಂಗಯ್ಯ ಅವರು ಜಾತಿವಾದಿಗಳಿಗೆ ಬಹಿರಂಗ ಎಚ್ಚರಿಕೆ ನೀಡಿ "ಹಿಂದೂ ಧರ್ಮ ಯುದ್ಧ,

(7ನೇ ಪುಟ ನೋಡಿ)

ಅಬ್ದುಲ್ ಗಫಾರ್ ಖಾನ್

ನೆಲಕ್ಕೊರಗಿದ ನೆಲದ ಚೇತನ



ಈ ನೆಲದ ಸತ್ವವನ್ನು ತನ್ನ ಮೈಯಲ್ಲಿ ಅರಳಿಸಿಕೊಂಡಿದ್ದ ಉದಾತ್ತ ಮಾನವ ಅಬ್ದುಲ್ ಗಫಾರ್ ಖಾನ್ ಈ ನೆಲದ ಋಣ ಕಳೆದುಕೊಂಡ ಕೂಡಲೆ ಚರಿತ್ರೆಯ ಎರಡು ಅಣಕ ಮುಖಗಳು ತೆರೆದುಕೊಂಡವು. ಒಂದು ಭಾರತದ್ದು. ಇನ್ನೊಂದು ಪಾಕಿಸ್ತಾನದ್ದು.

ಅವರನ್ನು ಇಳಿ ವಯಸ್ಸಿನಲ್ಲೂ ತನ್ನ ಜೈಲುಗಳ ಹೊಟ್ಟೆಯಲ್ಲಿ ಕೂಡಿಟ್ಟು ಹಿಂಸಿಸಿದ ಪಾಕಿಸ್ತಾನ ತನ್ನ ಸ್ವಭಾವಕ್ಕೆ ಅನುಗುಣವಾಗಿ ಸಾಂಪ್ರದಾಯಿಕ ಶೋಕವನ್ನೂ ವ್ಯಕ್ತಮಾಡಲಿಲ್ಲ. ಒಳಗೊಳಗೆ ತನ್ನ ಅಂತರಂಗದ ವೈರಿಯೊಬ್ಬ ಕೊನೆಗೊಂಡನೆಂಬ ಆತ್ಮಹತ್ಯೆಯ ಆನಂದ ಅನುಭವಿಸಿತು. ಭೀತಿ ಬೀಜವಾದ ಸರ್ವಾಧಿಕಾರದ ಒಂದು ಮುಖ ಇದು. ಅದರ ರಕ್ತಕ್ಕೆ ಎಲ್ಲವನ್ನೂ ತಿರಸ್ಕರಿಸುವ ದ್ವೇಷಿಸುವ ವಿಚಿತ್ರ ಹಠ ಸಹಜವೇ.

ಇನ್ನೊಂದು ಅಂತರಂಗ ಹುಳುಕು ಹಿಡಿದು ಬಹಿರಂಗ ಮೆರೆಸಿದ ಭಾರತದ ಮುಖ. ಇದು ಐದು ದಿನಗಳ ಕಾಲ ಶೋಕಾಚರಣೆ ಘೋಷಿಸಿತು. ಆಳುವ ಸಾಮ್ರಾಟರು, ಬುದ್ಧಿಜೀವಿಗಳು ಅವರನ್ನು ಶಾಂತಿದೂತ, ಪ್ರಜಾತಂತ್ರ ಸಂರಕ್ಷಕ, ದೇವರ ಪ್ರತಿನಿಧಿ, ಭಾರತದ ಸನ್ಮಿತ್ರ ಎಂದು ಮುಂತಾಗಿ ಹಾಡಿ ಹೊಗಳಿ ತಮ್ಮ ಹಿಪಾಕ್ರಸಿಯನ್ನು ಯಾವ ಎಗ್ಗೂ ಇಲ್ಲದೆ ಪ್ರದರ್ಶಿಸಿದವು. ಎಲ್ಲವನ್ನೂ ಒಳಗೊಳ್ಳುವ ಸೋಗಿನಲ್ಲಿ ಎಲ್ಲ ಒಳ್ಳೆಯದನ್ನೂ ನಿರ್ನಾಮಮಾಡುವ ವಿನಾಶದ ಮುಖವಿದು.

ಇದೇ ಅಂತರ್ಯ ದೇಶ ವಿಭಜನೆಗೊಂಡಾಗ ಅಬ್ದುಲ್ ಗಫಾರ್‌ಖಾನ್‌ರನ್ನು ವಂಚಿಸಿ ತಬ್ಬಲಿ ಮಾಡಿದ್ದು ಎನ್ನುವುದು ಯಾರೂ ಅರಿಯದ ರಹಸ್ಯವೇನಲ್ಲ. ಅಂದು ರಾಷ್ಟ್ರೀಯ ಕಾಂಗ್ರೆಸ್‌ನ್ನು ಕಬಳಿಸಿದ್ದ ಈ ದರಿದ್ರ ಮನಸ್ಸು ಗಫಾರ್‌ಖಾನ್‌ರಿಗೆ "ಏನೇ ಆಗಲಿ ನಾವು ದೇಶ ವಿಭಜನೆಯಾಗುವುದನ್ನು ಒಪ್ಪುವುದಿಲ್ಲ" ಎಂದು ನಂಬಿಸಿ ತಾನು ಮಾತ್ರ ಒಳಗೊಳಗೆ ಒಪ್ಪಿಗೆ ನೀಡಿಬಿಟ್ಟಿತು. ಆ ಸಂದರ್ಭದಲ್ಲಿ ದೆಹಲಿಯಲ್ಲೇ ಇದ್ದ ಖಾನ್‌ರ ಕಿವಿಗೆ ಈ ಒಳ ಒಡಂಬಡಿಕೆಯ ಗಾಳಿಸುದ್ದಿಯೂ ಬೀಳದಂತೆ ನೋಡಿಕೊಂಡಿತು. ಪರಿಣಾಮ ಖಾನ್ ದೇಶವಿಭಜನೆಯನ್ನು ವಿರೋಧಿಸುತ್ತಲೇ ಹೋದರು. ಕಾಂಗ್ರೆಸ್ ವಿಭಜನೆಗೆ ಒಪ್ಪಿಕೊಂಡಿತು. ಖಾನ್ ಮತ್ತು ಅವರ ಅನುಯಾಯಿಗಳಾದ ಪುಸ್ತು ಭಾಷಿಕ ಜನರು ತಬ್ಬಲಿಗಳಾದರು. "ಕಾಂಗ್ರೆಸ್ ಹೀಗೆ ನಡು ನೀರಿನಲ್ಲಿ ಕೈಬಿಟ್ಟಿದ್ದರಿಂದ ನಾವು ಜಿನ್ನಾ ಜತೆ ಸೇರೋಣ" ಎಂದು ಅವರ ಅನುಯಾಯಿಗಳು ಕೆಲವರು ಪಟ್ಟುಹಿಡಿದರು. ಆಗಲೂ ಖಾನ್ ಒಪ್ಪಲಿಲ್ಲ.

ಇಂಥ ಅಚಲ ನಿಷ್ಠೆಗೆ ಖಾನ್ ಮತ್ತು ಅವರ ಅನುಯಾಯಿಗಳು ಕೊಟ್ಟ ಬೆಲೆ ಲೆಕ್ಕಹಾಕದಷ್ಟು. ಹಿಮಾಲಯದ ಗಡಿಗಳಲ್ಲಿ ಅದಮ್ಯ ಸ್ವಾತಂತ್ರ್ಯ ಪ್ರೇಮ ಮೆರೆದ ಪುಸ್ತು ಭಾಷಿಕ ಜನ ಇತ್ತ ಅಫ್‌ಘಾನಿಸ್ತಾನ ಅತ್ತ ಪಾಕಿಸ್ತಾನ ಎಂದು ಗಡಿಗಳಾಚೆ ಹಂಚಿಹೋದರು. ಖಾನ್ ತಾಯ್ನಾಡಿನ ಮಡಿಲಿಲ್ಲದೆ ಪಾಕಿಸ್ತಾನದ ಜೈಲುಗಳಲ್ಲಿ ಬಂಧಿಯಾಗಿ ಹೋದರು. ಚರಿತ್ರೆ ಅವರನ್ನು ತಮ್ಮ 57ನೇ ವಯಸ್ಸಿನಲ್ಲಿ ಬಲವಂತವಾಗಿ ಪಾಕಿಸ್ತಾನಿಯನ್ನಾಗಿ ಮಾಡಿತು.

ಸ್ವಾತಂತ್ರ್ಯ ಹೋರಾಟವನ್ನು ತಮ್ಮ ಆತ್ಮಪ್ರತಿಷ್ಠೆಯ ವೇದಿಕೆ ಮಾಡಿಕೊಂಡ ಆ ನಂತರ ಅದರ ಫಲಾಫಲಗಳನ್ನು ಕೊಳ್ಳೆಹೊಡೆದ ಬಹುಪಾಲು ನಾಯಕರ ಶೈಲಿಯ ರಾಜಕಾರಣ ಖಾನ್‌ರದಲ್ಲ. ಅದು ತಮ್ಮ ಮನಸ್ಸಿನ ಮೂಸೆಯಲ್ಲಿ ಅನುಭವ, ಆಚರಣೆಗಳಿಂದ ರೂಪುಗೊಂಡ ರಾಜಕಾರಣ.

ಖಾನ್ ಮೊದಲಿಗೆ ಪೆಷಾವರ್ ಬಳಿಯ ಉತ್ತಮಂಜಾಯ್ ಎಂಬ ಹಳ್ಳಿಯಲ್ಲಿ ಪ್ರೈಮರಿ ಶಾಲೆ ತೆರೆಯುವುದರ ಮೂಲಕ ತಮ್ಮ ಸಾರ್ವಜನಿಕ ಚಟುವಟಿಕೆ ಪ್ರಾರಂಭಿಸಿದರು. ಆನಂತರ ಕ್ರಮೇಣ ತಮ್ಮ ಜನರ ನಡುವೆ ಅಹಿಂಸಾತ್ಮಕ ಸಾಮಾಜಿಕ ಬದಲಾವಣೆಗೆ ಕೈಹಾಕಿದರು.

1930ರಲ್ಲಿ ಗಾಂಧೀಜಿ ವಾಯುವ್ಯ ಗಡಿಭಾಗಗಳಿಗೆ ಭೇಟಿಕೊಟ್ಟರು. ಆಗ ಗಾಂಧಿಯವರ ಸುರಕ್ಷತೆ ನೋಡಿಕೊಳ್ಳಲು ಖಾನ್ ಶಸ್ತ್ರಸಜ್ಜಿತ ಅಂಗರಕ್ಷಕರನ್ನು ಕಾವಲು ನೇಮಿಸಿದರು. ಗಾಂಧಿ ಇದನ್ನು ಒಪ್ಪದೆ ನಿರಾಕರಿಸಿದರು. ಅಂಗರಕ್ಷಕರನ್ನು ವಾಪಸ್ಸು ತೆಗೆದುಕೊಳ್ಳಲಾಯಿತು.

1947ರ ದೇಶ ವಿಭಜನೆಯ ನಂತರ ಖಾನ್ ಪಾಕಿಸ್ತಾನದ ತಮ್ಮ ಹುಟ್ಟೂರಿಗೆ ಹೋದರು. ಅವರ ಕೆಂಪು ಸಮವಸ್ತ್ರಧಾರಿ ಕಾರ್ಯಕರ್ತರು ಸ್ವಪ್ರೇರಣೆಯಿಂದ ಕಾವಲಾಗಿ ನಿಲ್ಲಲು ಹೋದರು. ಆಗ ಗಾಂಧಿಯನ್ನು ನೆನಸಿಕೊಂಡ ಖಾನ್ ಅವರಿಗೆ ಬೈದು ವಾಪಸ್ಸು ಕಳುಹಿಸಿದರು. ಎಂದೂ ರಾಜಿಯಾಗದ, ಯಾರಿಗೂ ತಲೆ ಬಗ್ಗಿಸದ, ಅಹಿಂಸಾತ್ಮಕ ಹೋರಾಟದ ದಾರಿಯಿಂದ ಎಂದೂ ಹಿಂದೆಗೆಯದ ಖಾನ್ ಪಾಕಿಸ್ತಾನದ ಸರ್ವಾಧಿಕಾರಿ ಮನಸ್ಸಿಗೆ ಮಡಿಲ ಕಿಡಿಯಂತೆ ಕಂಡರು. ಫಲವಾಗಿ ಇಳಿವಯಸ್ಸಿನಲ್ಲೂ ಅವರು ಜೈಲುಗಳಲ್ಲಿ ಕೊಳೆಯುವಂತೆ ಆಯಿತು. ಹೀಗೆ ತಮ್ಮ ಮಧ್ಯವಯಸ್ಸಿನ ಅರ್ಧಕ್ಕಿಂತಲೂ ಹೆಚ್ಚಿನ ಆಯುಷ್ಯವನ್ನು ಬ್ರಿಟೀಷ್ ಜೈಲುಗಳಲ್ಲೂ, ಇನ್ನುಳಿದ ಆಯುಷ್ಯವನ್ನು ಪಾಕಿಸ್ತಾನಿ ಜೈಲುಗಳಲ್ಲೂ ಕೊನೆಗಾಲವನ್ನು ಸಾವಿನೊಂದಿಗೂ ಸೆಣಸುತ್ತಾ ಕಳೆದ ಖಾನ್ ಮೊನ್ನೆಯಷ್ಟೆ ನಮ್ಮನ್ನು ಅಗಲಿದರು.

ಇವರ ಚೈತನ್ಯವನ್ನು ತುಂಬು ಮನಸ್ಸಿನಿಂದ ಭಾರತ–ಅಫ್‌ಘಾನಿಸ್ತಾನ–ಪಾಕಿಸ್ತಾನ ಮೂರು ದೇಶಗಳು ತಮ್ಮ ಪ್ರಾಣವಿಲ್ಲದ ದೇಹ ಮನಸ್ಸಿಗೆ ತುಂಬಿಕೊಂಡಿದ್ದರೆ ಇಂದು ಉಪಖಂಡದಲ್ಲಿ ಭರವಸೆಯ ಬೆಳೆಯಾದರೂ ನಳನಳಿಸುತ್ತಿತ್ತು. ಪ್ರತಿ ಎದೆಗೂಡನ್ನೂ ಕೊರೆದು ತಿನ್ನುತ್ತಿರುವ ಹಿಂಸೆ, ದ್ವೇಷದ ಕ್ಯಾನ್ಸರ್ ರೋಗವನ್ನು ಹಬ್ಬದಂತೆ ತಡೆಯಬಹುದಿತ್ತು. ಎಲ್ಲಕ್ಕಿಂತ ಹೆಚ್ಚು ದೊಡ್ಡತನವನ್ನು ಗೌರವಿಸಿ ನೆನಪಿಟ್ಟುಕೊಳ್ಳುವುದಾದರೂ ಆಗುತ್ತಿತ್ತು.

ಅವರ ಸಾವಿಗೆ ಸ್ವಲ್ಪವಾದರೂ ನಿಜವಾದ ಶೋಕ ವ್ಯಕ್ತಪಡಿಸಿದ್ದು ಅಫ್‌ಘಾನಿಸ್ತಾನವೇ. ಖಾನ್‌ರ ಇಚ್ಛೆಯಂತೆ ಅವರ ದೇಹವನ್ನು ತನ್ನ ಹೊಟ್ಟೆಯೊಳಗೆ ಇಟ್ಟುಕೊಳ್ಳಲು ಮುಂದೆ ಬಂತು. ಅವರ ಸಾವಿರಾರು ಜನ ಅನುಯಾಯಿಗಳನ್ನು ವೀಸಾ ಇಲ್ಲದಂತೆ ತನ್ನ ಗಡಿಯೊಳಗೆ ಬಿಟ್ಟುಕೊಂಡಿತು.

ಎಲ್ಲಕ್ಕಿಂತ ಭಾರತದ ಮನಸ್ಸನ್ನು, ಚುಚ್ಚಿಚುಚ್ಚಿ ನರಳುವಂತೆ ಮಾಡಬೇಕಾದ್ದು ಅದು 1947ರಲ್ಲಿ ಎಸಗಿದ ದ್ರೋಹ. ಆ ಪಾಪಕೃತ್ಯವನ್ನು ಲೋಕದ ಕಣ್ಣೆದುರು ಶೋಕಾಚರಣೆಯ ನೆಪದಲ್ಲಿ ಮುಚ್ಚಿಕೊಳ್ಳುವುದು ಅಸಾಧ್ಯ. ಹೀಗೆ ಮುಚ್ಚಿಕೊಂಡಿದ್ದೇ ಆದರೆ ಈಗಾಗಲೇ ಇಂಡಿಯಾದ ರಾಜಕೀಯ ಅಂತರ್ಯವನ್ನು ವಿಷಗೊಳಿಸಿರುವ ಮಹಾದ್ರೋಹದ ಅಪರಾಧಿ ಭಾವ ಇನ್ನಷ್ಟು ವಿಷಗೊಳಿಸಬಲ್ಲುದು.

ಕನಿಷ್ಠ ಇಂಡಿಯಾದ ಮನಸ್ಸಿಗೆ ಇಷ್ಟು ನೆನಪಿದ್ದರೆ ಸಾಕು. ಭಾರತದ ಏಕತೆಗೆ ಹೋರಾಡಿದ್ದು ಹಿಂದೂ ಸಾವರ್‌ಕರ್ ಅಲ್ಲ, ಸ್ವಯಂಸೇವಕ ಸಂಘದ ಗುರು ಗೋಲ್ವಾಲ್ಕರ್ ಅಲ್ಲ. ರಾಷ್ಟ್ರೀಯತೆಯ ಹರಿಕಾರ ನೆಹರೂ ಕೂಡ ಅಲ್ಲ. ಅಷ್ಟೇಕೆ ದೇಶವಿಭಜನೆಯನ್ನು ತನ್ನ ದೇಹದ ವಿಭಜನೆ ಎಂದು ಬಗೆದು ಕಾರ್ಯಶೀಲರಾಗಿದ್ದ ಗಾಂಧಿ ಕೂಡ ಅಲ್ಲ. ಅದು ಒಬ್ಬನೇ ಒಬ್ಬ ಮುಸ್ಲಿಂ—ಆತ ಅಬ್ದುಲ್ ಗಫಾರ್‌ಖಾನ್. ನೆಲದ ಅಂತಃಸ್ಸತ್ವವನ್ನರಿಯದ ಇವತ್ತಿನ ರಾಜಕೀಯ ನೇತಾರರೂ, ಈಗಷ್ಟೆ ಕಣ್ಣುಬಿಡುತ್ತಿರುವ ನಾವು ಖಾನ್ ಸಾಹೇಬರಂತಹ ದೊಡ್ಡ ಚೇತನಗಳಿಂದ ಪಡೆದುಕೊಳ್ಳುವಂತಹದ್ದು ತುಂಬಾ ಇದೆ ಅನ್ನುವುದೇ ನಾವು ಅವರಿಗೆ ಸಲ್ಲಿಸುವ ಗೌರವ.

ಖಾನ್ ಅಬ್ದುಲ್ ಗಫಾರ್ ಖಾನ್‌ರ ಪಠಾಣ ಕೋಮಿನ ಜನ. ಹುಟ್ಟು ಹಿಂಸಾವಾದಿಗಳು. ಆಕ್ರಮಣ, ಶೌರ್ಯ ಅವರ ರಕ್ತಕ್ಕೆ ಅಂಟಿಕೊಂಡ ಗುಣಗಳು. ಇಂಥ ರಕ್ತಗುಣದ ಖಾನ್‌ರನ್ನು ಬದಲಿಸಿದ್ದು ಒಂದೇ ಒಂದು ಘಟನೆ. ಅದು ನಡೆದದ್ದು 1928ರಲ್ಲಿ ಕಲಕತ್ತಾ ಕಾಂಗ್ರೆಸ್ ಅಧಿವೇಶನದ ವೇಳೆ. ಗಾಂಧಿ ವೇದಿಕೆಯ ಮೇಲೆ ನಿಂತು ಮಾತನಾಡುತ್ತಿದ್ದರು. ಸಭೆ ಆಲಿಸುತ್ತಿತ್ತು. ಆಗ ಇದ್ದಕ್ಕಿದ್ದಂತೆ ಒಬ್ಬ ತರುಣ ವೇದಿಕೆ ಮೇಲೆ ಜಿಗಿದು ಹೋಗಿ 'ಮಹಾತ್ಮಾಜಿ ನೀನೊಬ್ಬ ಹೇಡಿ. ನೀನೊಬ್ಬ ಹೇಡಿ' ಎಂದು ಕಿರುಚಿದ. ಗಾಂಧಿ ಆಗ ಕೇವಲ ನಕ್ಕರು. ಹೃದಯ ತುಂಬ ನಕ್ಕರು. ಮಾತು ಮುಂದುವರೆಸಿದರು. 'ಅವರ ಸಮಚಿತ್ತತೆ ಕಂಡು ನಾನು ದಂಗುಬಡಿದು ಹೋದೆ' ಎಂದು ಅನೇಕ ಸಾರಿ ಖಾನ್ ತಮ್ಮ ಬದುಕಿನ ಅತ್ಯಂತ ಸ್ಮರಣೀಯವಾದ ಆ ಘಟನೆಯನ್ನು ನೆನಪು ಮಾಡಿದ್ದಾರೆ.

ಹೀಗೆ ತಮ್ಮ ಮನಸ್ಸನ್ನು ಬದಲಿಸಿಕೊಳ್ಳುತ್ತಲೇ ಇನ್ನೊಬ್ಬರ ಮನಸ್ಸನ್ನು ಮುಟ್ಟುವ ದಾರಿ ಹಿಡಿದ ಖಾನ್ ಇತಿಹಾಸ ಸದಾ ನೆನಪಿಟ್ಟುಕೊಳ್ಳಬಹುದಾದಷ್ಟು ಅಪರೂಪದ ಸಂಘಟನೆ ಕಟ್ಟಿದರು. ಅದರಡಿ ಹಿಂಸಾ ಪ್ರವೃತ್ತಿಯ ಪಠಾಣರನ್ನೂ ಅಹಿಂಸೆಯ ದಾರಿಯಲ್ಲಿ ನಡೆಸಿದರು. ಆ ಸಂಘಟನೆಯ ಹೆಸರು, 'ಖುದಾಯಿ ಖಿದ್ಮತ್‌ಗಾರ್' (ಭಗವಂತನ ಸೇವಕ) ಇದರಡಿ ಅಸಮಾನ್ಯ ಸಾಹಸಿಗಳು, ಯೋಧರೂ, ಕಾರ್ಯಕರ್ತರಾಗಿ ದುಡಿದರು. ಅವರೆಲ್ಲರ ಆಯುಧ 'ಅಹಿಂಸೆ' ಅವರೆಲ್ಲರ ದಾರಿ ಪ್ರೇಮ.

ಈ ಯೋಧರು ಎಷ್ಟೋ ಬಾರಿ ಬ್ರಿಟೀಷರ ಬಂದೂಕುಗಳಿಗೆ ಅಲ್ಲಿಂದ ಗುಂಡುಗಳ ಬದಲು ಹೂವುಗಳು ಸಿಡಿದು ಬರುತ್ತವೆ. ಅನ್ನುವಂತೆ ಎದೆಯೊಡ್ಡಿ ನಿಂತಿದ್ದು ಬ್ರಿಟೀಷ್ ಸೈನಿಕರು ಬಂದೂಕು ಕೆಳಗಿಟ್ಟು ಹಿಮ್ಮೆಟ್ಟಿದ್ದೂ ಉಂಟು. 'ಖಿದ್ಮತ್‌ಗಾರ್' ಸೇವಕನಾಗಬೇಕಾದರೆ ಈ ಕೆಳಗಿನ ಪ್ರತಿಜ್ಞಾ ಪತ್ರಕ್ಕೆ ತನ್ನನ್ನು ತಾನು ಒಡ್ಡಿಕೊಳ್ಳಬೇಕಿತ್ತು. ಪ್ರತಿಜ್ಞೆಗಳನ್ನು ಪಾಲಿಸಬೇಕಿತ್ತು.

ಪ್ರತಿಜ್ಞಾ ಪತ್ರ

ದೇವರ ಎದುರು ನಾನು ಪ್ರಮಾಣಮಾಡಿ ಹೇಳುತ್ತೇನೆ.

1. ಸತ್ಯ ಮತ್ತು ನೀತಿಯೊಂದಿಗೆ ನಾನು 'ಖುದಾಯಿ ಖಿದ್ಮತ್‌ಗಾರ್'ನಾಗಿ ಸೇರುತ್ತಿದ್ದೇನೆ.
2. ಸ್ವಂತ ಸುಖವನ್ನು, ಸ್ವಂತ ಆಸ್ತಿಯನ್ನು, ಪ್ರಾಣವನ್ನು ಸಹಿತ ರಾಷ್ಟ್ರದ ಹಿತಕ್ಕೆ, ದೇಶದ ಸ್ವಾತಂತ್ರ್ಯಕ್ಕೆ ತ್ಯಾಗಮಾಡಲು ಯಾವತ್ತೂ ಸಿದ್ಧ ಇದ್ದೇನೆ.
3. ನಾನು ಯಾವುದೇ ಗುಂಪುಗಾರಿಕೆ ಮಾಡುವುದಿಲ್ಲ. ಯಾರನ್ನೂ ದ್ವೇಷಿಸುವುದಿಲ್ಲ. ಬಲಾತ್ಕಾರ, ದಬ್ಬಾಳಿಕೆಗೆ ಸಿಕ್ಕ ಬಲಹೀನನನ್ನು ಸದಾ ರಕ್ಷಿಸುವೆ.
4. ಬೇರೆ ಯಾವ ಸಂಸ್ಥೆ, ಸಂಘಟನೆಗೂ ಸೇರಲಾರೆ. ನಾನು ಸಾಗಿಸುವ ಅಹಿಂಸಾತ್ಮಕ ಹೋರಾಟದಲ್ಲಿ ಯಾರಿಗೂ ತಲೆಬಾಗುವುದಿಲ್ಲ. ಕ್ಷಮಾಪಣೆ ಕೇಳಿಕೊಳ್ಳುವುದಿಲ್ಲ.
5. ಸಂಘಟನೆಯಲ್ಲಿ ನನಗಿಂತ ಹಿರಿಯರು ಕೊಡುವ ಎಲ್ಲ ನ್ಯಾಯಯುತ ತೀರ್ಮಾನಗಳನ್ನೂ ಶಿರಸಾ ಪಾಲಿಸುತ್ತೇನೆ.
6. ಯಾವತ್ತೂ ಅಹಿಂಸಾ ಸಿದ್ಧಾಂತಕ್ಕೆ ಬದ್ಧವಾಗಿರುತ್ತೇನೆ.
7. ಸಕಲ ಮಾನವರಿಗೂ ಸಮಾನಸೇವೆ ಸಲ್ಲಿಸುವೆ. ಸಂಪೂರ್ಣ ಸ್ವರಾಜ್ಯ, ಸಂಪೂರ್ಣ ಮತೀಯ ಸೌಹಾರ್ದ ನನ್ನ ಜೀವನದ ಆಶಯ.
8. ನಾನು ಮಾಡುವ ಪ್ರತಿ ಕೆಲಸವನ್ನೂ ಸತ್ಯ, ನಿಷ್ಠೆ, ಶುದ್ಧತೆಯಿಂದ ಮಾಡುವೆ.
9. ನಾನು ಮಾಡುವ ಸೇವೆಗೆ ಯಾವುದೇ ಪ್ರತಿಫಲ ಆಶಿಸುವುದಿಲ್ಲ.
10. ನನ್ನ ಸೇವೆಯೆಲ್ಲಾ ಭಗವಂತನಿಗೆ ಅರ್ಪಿತ. ಅದು ಪದವಿಗಾಗಿ ಅಲ್ಲ. ಪ್ರತಿಷ್ಠೆ ಪ್ರದರ್ಶನ ಮಾಡಲಂತೂ ಖಂಡಿತ ಅಲ್ಲ.

ತಪ್ಪಿದ ತೂಗುಗತ್ತಿ....!

ಆಳುವ ಜನತಾಸರ್ಕಾರದ ಜನದ್ರೋಹಿ ಪ್ರಯತ್ನವೊಂದು ಸದ್ಯಕ್ಕೆ ನಿಂತಿದೆ. ಬೆಂಡಿಗೇರಿಯ ನೋವಿನಿಂದ ಇನ್ನೂ ಚೇತರಿಸಿಕೊಳ್ಳುವ ಮುನ್ನವೇ ಜನತಾ ಪಕ್ಷ ಸಾವಿರಾರು ಭೂಹೀನ, ಬಡ, ದಲಿತರ ತಲೆಯ ಮೇಲೆ ಕಲ್ಲು ಹಾಕುವ, ಅವರ ಬಾಳಿಗೆ ಮಣ್ಣು ಹಾಕುವ ಸನ್ನಾಹಕ್ಕೆ ಮುಂದಾಗಿತ್ತು.

ಒತ್ತುವರಿ ಭೂಮಿ ಸಕ್ರಮ ಮಾಡುವ ನೆಪದಲ್ಲಿ 50 ಸಾವಿರ ಎಕರೆ ಫಲವತ್ತಾದ ಕಾಫಿ ಬೆಳೆಯುವ ಭೂಮಿಯನ್ನು ಶ್ರೀಮಂತ ಪ್ಲಾಂಟರುಗಳ ವಶಕ್ಕೆ ಕೊಟ್ಟುಬಿಡಲು ಸರ್ಕಾರ ಮುಂದಾಗಿತ್ತು. ಎಸ್. ಆರ್. ಬೊಮ್ಮಾಯಿಯವರ ನೇತೃತ್ವದಲ್ಲಿ ಇದಕ್ಕೆಂದೇ ಒಂದು ಶಾಸಕ ಸಮಿತಿಯನ್ನು ನೇಮಿಸಿತ್ತು. ಈ ಸಮಿತಿ ವರದಿ ನೀಡಿ ಶ್ರೀಮಂತ ಪ್ಲಾಂಟರುಗಳಿಗೆ ಭೂಮಿ ಕೊಟ್ಟುಬಿಡಲು ಸಲಹೆ ಮಾಡಿತು. ಅದರಂತೆ ಈ ಅಧಿವೇಶನದಲ್ಲಿ ಈ ಕಾಯ್ದೆ ಪಾಸಾಗುವುದರಲ್ಲಿತ್ತು. ಪ್ಲಾಂಟರುಗಳೂ ಹಣದ ಥೈಲಿ ಹಿಡಿದು ತುದಿಗಾಲ ಮೇಲೆ ನಿಂತಿದ್ದರು.

ದ. ಸಂ. ಸ. ಸರ್ಕಾರದ ಈ ಕುತಂತ್ರವನ್ನು ಬಯಲಿಗೆಳೆದು ವರದಿ ಪಾಸಾಗಿದ್ದೇ ಆದರೆ ಉಗ್ರ ಹೋರಾಟ ಕೈಗೊಳ್ಳುವುದಾಗಿ ಘೋಷಿಸಿತು. ದಲಿತ ಸಚಿವ ಶಾಸಕರನ್ನು 'ಸುಮ್ಮನೆ ಬಿಡುವುದಿಲ್ಲ' ಎಂದು ಎಚ್ಚರಿಸಿತು. ಪರಿಣಾಮ ಮೊಟ್ಟ ಮೊದಲ ಬಾರಿಗೆ ದಲಿತ ಸಚಿವ, ಶಾಸಕರು, ಉಗ್ರವಾಗಿ ಪ್ರತಿರೋಧಿಸಿದರು. ಸರ್ಕಾರ ಮಸೂದೆಯನ್ನು ಈ ಬಾರಿ ಹಿಂತೆಗೆದುಕೊಂಡಿದೆ. ಆದರೆ ಅಪಾಯ ಇನ್ನೂ ತಪ್ಪಿಲ್ಲ. ಈಗ ಈ ಕಾಯ್ದೆಯನ್ನು ತಡೆದು ಬಡವರಿಗೆ ಭೂಮಿ ಹಂಚುವಂತೆ, ಪ್ಲಾಂಟೇಷನ್ ಭೂಮಿಗೆ ಭೂಮಿತಿ ಅಳವಡಿಸುವಂತೆ, ವ್ಯಾಪಕ ಹೋರಾಟ ನಡೆಸಲು ದ. ಸಂ. ಸ. ಶಾಖೆಗಳು ಸಿದ್ಧವಾಗಬೇಕಿದೆ.

ಮಹಾಚೇತನಗಳ ಹೆಜ್ಜೆ....

(5ನೇ ಪುಟದಿಂದ)

ಬಸವಣ್ಣ, ವಿವೇಕಾನಂದರ ಸಿದ್ಧಾಂತಗಳನ್ನು ಅರಗಿಸಿಕೊಂಡಿರಬಹುದು ಆದರೆ ಅಂಬೇಡ್ಕರ್‌ರ ಸಿದ್ಧಾಂತವನ್ನು ಅರಗಿಸಿಕೊಳ್ಳಲು ಆಗುವುದಿಲ್ಲ" ಎಂದರು. ದಲಿತರು ಇನ್ನು ಮುಂದೆ ಜಾತಿವಾದಿ ಸವರ್ಣೀಯರಿಗೆ ಸರಿಯಾದ ಬುದ್ಧಿ ಕಲಿಸಬೇಕಾದರೆ ಅವರ ಆಚರಣೆ ರೀತಿ ನೀತಿಗಳನ್ನು ಕೈಬಿಡಬೇಕೆಂದು ಕರೆನೀಡಿದರು.

ಅಧ್ಯಕ್ಷತೆ ವಹಿಸಿದ್ದ ಬಿ. ವಿ. ಚಂದ್ರಪ್ರಸಾದ್ ತ್ಯಾಗಿ ಅವರು ಹಿಂದೂ ಧರ್ಮ ಮತ್ತು ಹೆಗಡೆ ಸರ್ಕಾರಕ್ಕೆ ತಗುಲಿರುವ ರೋಗ ನಿವಾರಿಸಲು ದ.ಸಂ.ಸ. ಕಾರ್ಯಕರ್ತರು ಡಾಕ್ಟರುಗಳಾಗಬೇಕೆಂದು ಕರೆಕೊಟ್ಟರು. "ದಲಿತರನ್ನು ಕೊಲ್ಲುತ್ತಿರುವ ವಿಷದ ಹೆಂಡವನ್ನು ನಿಲ್ಲಿಸಿ ಎಂದು ಅನೇಕ ಬಾರಿ ಚಳುವಳಿ ನಡೆಸಿದರೂ ಗೊತ್ತಿಲ್ಲದ ಹಾಗೆ ಹೆಗಡೆ ಸರ್ಕಾರ ನಾಜೂಕಯ್ಯನ ನಟನೆ ಮಾಡುತ್ತಿದೆ. ಕಿವುಡ ಮತ್ತು ಮೂಗ ನಟನೆ ಮಾಡುತ್ತಿದೆ. ಕುಡಿತದ ಬಗ್ಗೆ ವಿಧಾನ ಸಭೆಯಲ್ಲಿ ಸಚಿವ ಪಟೇಲ್ ಕತೆ ಹೇಳಿದ್ದಾರೆ. ದಲಿತ ಶಾಸಕ ಸಚಿವರು ದಡ್ಡರಂತೆ ಕತೆ ಕೇಳಿದ್ದಾರೆ" ಎಂದು ಕೆರಳಿ ನುಡಿದರು. "ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ಚುನಾವಣೆಗಳಾದ ನಂತರ ಹಳ್ಳಿಹಳ್ಳಿಗಳಲ್ಲಿ ಜನತಾ ಪಕ್ಷದ ಕಾರ್ಯಕರ್ತರ ದಬ್ಬಾಳಿಕೆ ತೀವ್ರವಾಗಿದೆ. ಗೌಡರು, ಲಿಂಗಾಯಿತರಂಥ ಬಲಿಷ್ಠ ಕೋಮುಗಳಿಗೆ ಅಧಿಕಾರ ಬಂದಿದ್ದು ಪೋಲೀಸ್ ಠಾಣೆಯಲ್ಲಿ ದೂರು ನೀಡಲು ದಲಿತರು ಅಂಜುತ್ತಿದ್ದಾರೆ" ಎಂದರು.

ಮಲತಿನ್ನುವ ದೌರ್ಜನ್ಯಕ್ಕೆ ಒಳಗಾದ, ಸುಭಾಷ್ ಕಲ್ಲಪ್ಪ ಕೋಲ್ಕರ್, ಯಲ್ಲಪ್ಪ ದೊಡ್ಡಪ್ಪ ಕೋಲ್ಕರ್ ಮಡಿವಾಳೀ ಮುದುಕಪ್ಪ ಹೈಬತ್ತಿ, ಸಾವಂತ ಸಿದ್ದಪ್ಪ ಕೋಲ್ಕರ್ ಹಾಗೂ ಕಲ್ಲಪ್ಪ ದ್ಯಾಮಪ್ಪ ತಳವಾರ್, ವೇದಿಕೆಯ ಮೇಲೆ ಹಾಜರಿದ್ದರು. ಯುವಕ ಸುಭಾಷ್ ಅಂದು ನಡೆದ ಭೀಕರ ಘಟನೆಗಳನ್ನು ಸಭೆ ಮುಂದೆ ಮತ್ತೊಮ್ಮೆ ತೆರೆದಿಟ್ಟರು. ಸಭೆ ತಲ್ಲಣಿಸಿತು. ನೆರೆದಿದ್ದ ಒಟ್ಟು ಸಭೆ ಡಾ॥ ಬಿ.ಎಂ. ತಿಪ್ಪೇಸ್ವಾಮಿ ವರದಿಯನ್ನು ಕೂಡಲೇ ಜಾರಿಗೆ ತರುವಂತೆ ಒತ್ತಾಯಿಸಿತು.

ದಲಿತರ ಕೇರಿಗಳಲ್ಲಿ ಹೆಂಡದ ಅಂಗಡಿಗಳನ್ನು ಮುಚ್ಚುವುದು, ದಲಿತ ಮಕ್ಕಳಿಗೆ ಹೋಬಳಿಗೊಂದು ವಸತಿ ಶಾಲೆ, ರಾಜ್ಯದ ಉದ್ದಗಲಗಳಲ್ಲಿ ನಡೆದಿರುವ ದೌರ್ಜನ್ಯ ಪ್ರಕರಣಗಳ ತನಿಖೆ, ಪ್ಲಾಂಟೇಷನ್ ಭೂ ಒಡೆತನಕ್ಕೆ ಭೂಮಿತಿ ಕಾನೂನು ಅಳವಡಿಸುವುದು, ಹಸಿರುಪಟ್ಟಿ ವಲಯದಲ್ಲಿ ಹಂಗಾಮಿ ಸಾಗು ಮಾಡಿರುವ ದಲಿತರಿಗೆ ಹಕ್ಕುಪತ್ರ ನೀಡುವುದು ಮುಂತಾದ ಬೇಡಿಕೆಗಳಿಗೆ ಒತ್ತಾಯಿಸಿದರು.

ಸಭೆ ಮುಗಿಯುತ್ತಿದ್ದಂತೆ ಜನಸಾಗರ ಕರಗತೊಡಗಿತು. ಮರಗಿಡ ಬಳ್ಳಿಗಳ ಜೊತೆ ಬೆರೆತುಹೋಗಿದ್ದ ಜನ ವಿದಾಯ ಹೇಳುತ್ತ ಅಗಲತೊಡಗಿದರು. ಕಬ್ಬನ್ ಪಾರ್ಕ್ ತನ್ನ ಎಂದಿನ ಪರಕೀಯತೆಗೆ ವಾಲತೊಡಗಿತು.

ದೇಶವೇ ಹೇಲು ತಿನ್ನುವ ದಿನ ದೂರ ಇಲ್ಲ

ಬೆಂಡಿಗೇರಿ: ದುಃಸ್ವಪ್ನಗಳ ನೆನಪುಗಳು

ಇಪ್ಪತ್ತೊಂದನೇ ಶತಮಾನಕ್ಕೆ ಕರೆದೊಯ್ಯುವ ಪ್ರಧಾನಿಯವರ ಕನಸಿನ ವಿಡಂಬನೆಯೇ ಎನ್ನುವಂತೆ ಈ ದುಷ್ಟ ಸಮಾಜದಲ್ಲಿ ಬಹು ಆಳವಾಗಿ ಬೇರು ಬಿಟ್ಟುಕೊಂಡಿರುವ ಜಾತಿ ವ್ಯವಸ್ಥೆಯ ವಿಷಾನಿಲ ಮಾನವಂತರನ್ನೆಲ್ಲ ಉಸಿರುಗಟ್ಟಿಸಿ ಕೊಲ್ಲುತ್ತ ನಮ್ಮನ್ನೆಲ್ಲ ಬರ್ಬರ ಸಂಸ್ಕೃತಿಯ ಕಡೆಗೇ ರಭಸವಾಗಿ ಸೆಳೆದು ಕೊಂಡು ಹೋಗುತ್ತಿದೆ. ಮನುಷ್ಯ–ಮನುಷ್ಯನನ್ನೇ ನಿಷ್ಕರುಣೆಯಿಂದ ಕಿತ್ತು ತಿನ್ನುತ್ತಿದ್ದ, ಅನುಕಂಪ ಸಹಾನುಭೂತಿಗೆ ಆಸ್ಪದವೇ ಇಲ್ಲದಿದ್ದ ಅಂಥ ಭೀಕರ ಸ್ಥಿತಿಯಿಂದ ದೂರವಾಗಿದ್ದೇವೆನ್ನುವ ಮಾನವೀಯತೆಯ ನೆಲೆ ಅಷ್ಟಿಷ್ಟು ಉಳಿದುಕೊಂಡಿರುವ ಹೃದಯವಂತರ ಎದೆಗೆ ಕೊಳ್ಳಿಯಿಕ್ಕುವಂತೆ ಕರ್ನಾಟಕದಲ್ಲೇ ಒಂದು ಬರ್ಬರ ಕೃತ್ಯ ನಡೆದಿದೆ.

ಈ ಘಟನೆ ನಡೆದದ್ದು ಬೆಳಗಾವಿಯ ಸಮೀಪದ ಬೆಂಡಿಗೇರಿ ಎಂಬ ಪುಟ್ಟ ಹಳ್ಳಿಯಲ್ಲಿ. ಪ್ರಧಾನಿ ಮುಖ್ಯಮಂತ್ರಿಗಳು ಕೆಮ್ಮಿದ್ದು ಸೀನಿದ್ದಕ್ಕೂ ಪುಟಗಟ್ಟಲೆ ವರದಿ ಮಾಡುವ, ಪತ್ರಿಕಾ ಧರ್ಮವನ್ನು ಗಾಳಿಗೆ ತೂರಿ ಕ್ಷುದ್ರ ಸಂಗತಿಗಳಿಗೆ ಭೂತ ಕನ್ನಡಿ ಹಾಕಿ ದಪ್ಪಕ್ಷರಗಳಲ್ಲಿ ಮುಖಪುಟದ ಸಂಪಾದಕೀಯ ಬರೆಯುವ ಪತ್ರಿಕೆಗಳಲ್ಲಿ ಈ ಸುದ್ದಿ ವರದಿಯಾಗಲಿಲ್ಲ.

ಆದ್ದರಿಂದಲೇ ಐದು ತಿಂಗಳ ಹಿಂದೆ ಅಂದರೆ 1987ರ ಆಗಸ್ಟ್‌ನಲ್ಲಿ ನಡೆದ ಈ ಪ್ರಕರಣ ಕೆಲವು ಪ್ರಗತಿಪರ ಸಂಘಟನೆಗಳ ಆಕ್ರೋಶದ ಫಲವಾಗಿ ಈಗ ಬೆಳಕಿಗೆ ಬರುತ್ತಿದೆ.

ಮೇಲು ಜಾತಿಯವರು ಹರಿಜನರ ಮೇಲೆ ನಡೆಸುವ ದೌರ್ಜನ್ಯ, ದಬ್ಬಾಳಿಕೆಗಳಿಗೆ ಇತಿಮಿತಿಯೇ ಇಲ್ಲ. ಕಣ್ಣು ಕಿತ್ತ, ಕೈಕಾಲು ಮುರಿದ, ಊರಿನಿಂದ ಬಹಿಷ್ಕರಿಸಿದ, ಗುಡಿಸಲುಗಳಿಗೆ ಬೆಂಕಿ ಹಚ್ಚಿದ ಪ್ರಕರಣಗಳನ್ನು ದಾಟಿ ಬೆಂಡಿಗೇರಿಯ ಮೇಲು ಜಾತಿಯ ಮೊಸಳೆಗಳು ಇನ್ನೂ ಒಂದು ಹೆಜ್ಜೆ ಮುಂದು ಹೋಗಿದ್ದಾರೆ. ದಲಿತರ ಮೇಲಿನ ದೌರ್ಜನ್ಯಗಳ ಇತಿಹಾಸದಲ್ಲಿ ಅತ್ಯಂತ ಭೀಕರ ಹೇಯ ಕೃತ್ಯವೆಸಗಿ ಕ್ರೂರ ಆನಂದವನ್ನು ಅನುಭವಿಸಿದ್ದಾರೆ.

ಈಗ ಮುಖ್ಯ ವಿಚಾರಕ್ಕೆ ಬರೋಣ. ಯಂತ್ರ ನಾಗರೀಕತೆಯ ಪರಿಣಾಮವಾಗಿ ಅವುಗಳೊಟ್ಟಿಗೇ ದುಡಿಯುವ ನಮ್ಮ ಮನಸ್ಸುಗಳು ಸಂವೇದನೆ ಸೂಕ್ಷ್ಮತೆಗಳನ್ನು ಕಳೆದುಕೊಳ್ಳುವ ಮುನ್ನ ಎಚ್ಚರಗೊಳ್ಳಬೇಕಿದೆ. ಹೃದಯಾಂತರಾಳದಲ್ಲಿ ಇನ್ನೂ ಸ್ವಲ್ಪ ಸ್ವಲ್ಪ ಉಳಿದಿರಬಹುದಾದ ಮಾನವೀಯತೆಯನ್ನು ಅರಳಿಸಿಕೊಳ್ಳಬೇಕಾಗಿದೆ. ಜಾತಿಗಳ ಸಂಘರ್ಷದಿಂದ ಈ ದೇಶಕ್ಕೆ ಕೆಟ್ಟದ್ದೇ ಆಗುತ್ತ ಬಂದಿದೆಯೆಂಬುದಕ್ಕೆ ಚರಿತ್ರೆಯಲ್ಲಿ ವಿಪುಲ ನಿದರ್ಶನಗಳಿವೆ. ದಲಿತರನ್ನು ಸುಡುವ ಬೆಂಕಿ ದೇಶವನ್ನೇ ಸುಡುತ್ತದೆ. ಹಾಗೆಯೇ ಬೆಂಡಿಗೇರಿಯ ದಲಿತರು ತಿಂದ ಹೇಲನ್ನು ದೇಶದ ಎಲ್ಲ ಜನಗಳಿಗೂ ತಿನ್ನುವ ಪರಿಸ್ಥಿತಿ ಬಂದೇ ಬರುತ್ತದೆ. ಈ ದುರಾಲೋಚನೆ ನಮ್ಮನ್ನು ಎಚ್ಚರಿಸದಿದ್ದರೆ ಜಾತಿಯ ವಿಷ ವರ್ತುಲದಲ್ಲಿ ಇಡೀ ದೇಶದ ಜನತೆಯೇ ಉಸಿರು ಕಟ್ಟಿ ಸಾಯಬೇಕಾಗುತ್ತದೆ. ಆದ್ದರಿಂದ ಮನುಷ್ಯತ್ವ ಇರುವ ಎಲ್ಲರೂ ಇಂಥ ಪ್ರಕರಣಗಳ ತಪ್ಪಿತಸ್ಥರನ್ನು ಶಿಕ್ಷಿಸಲು ಸರ್ಕಾರ, ಮುಖ್ಯಮಂತ್ರಿ, ಮಂತ್ರಿ, ಶಾಸಕ, ಅಧಿಕಾರಿ ಇತ್ಯಾದಿಗಳನ್ನು ಒತ್ತಾಯಿಸಬೇಕಾಗುತ್ತದೆ. ಭೀತಿ-ಅವಮಾನಗಳಲ್ಲಿ ಕುಗ್ಗಿದವರಿಗೆ ಧೈರ್ಯ – ಸಾಂತ್ವನ ಹೇಳಬೇಕಾಗುತ್ತದೆ. ವಿನಾಶದ ಅಂಚಿನಲ್ಲಿರುವ ಈ ಮಾನವಕುಲದ, ಮನುಷ್ಯತ್ವದ ಉಳಿವಿಗಾಗಿ ಮಾನವ ಜನ ಇಷ್ಟಾದರೂ ಮಾಡಲೇಬೇಕಾಗುತ್ತದೆ.

● **ಬೈರಮಂಗಲ ರಾಮೇಗೌಡ**
(ಕೃಪೆ: ಆಭರಣ)

ನನ್ನ ತಲೆ ರಾಡಿ.......!

ಮಾನ್ಯರೇ,

ಆಗಸ್ಟ್ 3ರಂದು ಬೆಂಡಿಗೇರಿ ಗ್ರಾಮದಲ್ಲಿ ನಡೆದ ಆ ಘಟನೆಯನ್ನು ಕೇಳಿದಾಗಿನಿಂದಲೂ ನನ್ನ ನೆಮ್ಮದಿ ಹಾಳಾಗಿದೆ. ಕ್ಷಣ ಕ್ಷಣವೂ ಅದರ ವಿರಾಟ್‌ರೂಪ ಕಣ್ಣೆದುರು ತೆರೆದುಕೊಳ್ಳುತ್ತಾ ಕಾಡುತ್ತಿದೆ. ಈಗ ನನಗೆ—

ಬೆಂಡಿಗೇರಿ

ಮಧ್ಯಪ್ರದೇಶದ ಭೂಪಾಲ್
ರಷ್ಯದ ಚೆರ್ನೋಬೈಲ್
ಜಪಾನಿನ ನಾಗಸಾಕಿ, ಹಿರೋಷಿಮಾ

—ಈ ಎಲ್ಲವನ್ನೂ ಮೀರಿದ ಇತಿಹಾಸದ ಕರಾಳ ದುಃಘಟನೆ. ಇಡೀ ಪ್ರಪಂಚದಲ್ಲಿಯೇ ಭೂಮಿ ಸೃಷ್ಟಿಯಾದಾಗಿನಿಂದಲೂ ಕಂಡು ಕೇಳರಿಯದ ಘಟನೆ. ಜರ್ಮನಿಯ ಹಿಟ್ಲರ್‌ನ ಪಾಶವೀ ಹಿಂಸಾಕಾಂಡವನ್ನೂ ನಾಚಿಸುವ ಈ ಘಟನೆಯ ನಂತರ ನನ್ನ ತಲೆ ತಿನ್ನುತ್ತಿರುವ ಕೆಲವು ಪ್ರಶ್ನೆಗಳು :

ಈ ಘಟನೆ ಕಂಡೂ–ಕೇಳಿಯೂ ಸವರ್ಣೀಯರ ಗಂಟಲಲ್ಲಿ ತುತ್ತು ಹೇಗೆ ಇಳಿಯುತ್ತಿದೆ ?

ಮೀನಾಕ್ಷಿಪುರಂ ಮತಾಂತರದ ವೇಳೆ ತಿಕ ಸುಟ್ಟವರಂತೆ ಅಲ್ಲಿಗೆ ಜಿಗಿದೋಡಿದ ಮಠಾಧೀಶರು ಬೆಂಡಿಗೇರಿಯತ್ತ ಮೊಕ ಯಾಕೆ ಹಾಕಲಿಲ್ಲ ?

ರಾಷ್ಟ್ರೀಯ ಸ್ವಯಂ ಸೇವಕರ ಲಾಠಿ, ಚೆಡ್ಡಿಗಳು ಏನಾಗಿದ್ದವು ?

ಪ್ರಗತಿಪರರು, ವಿಚಾರವಾದಿಗಳು ಬಾಯಿ ಮುಚ್ಚಿಕೊಂಡಿದ್ದ ಹಿನ್ನೆಲೆಯಾದರೂ ಏನು ?

—ಹೇಲು ತಿನ್ನಿಸಿದವರಲ್ಲಿ ಇಬ್ಬರು ಶಿಕ್ಷಕರು. ಅವರ ಪಾಪಿಷ್ಠ ಕೈಗಳು ಮುಗ್ಧ ಮಕ್ಕಳಿಗೆ ಅಕ್ಷರ ಬರೆಸಿ ತಿದ್ದಿಸುವ ಶ್ರೇಷ್ಠ ಕಾಯಕವ ಎಂತು ಮಾಡಿಯಾವು ? ಮಕ್ಕಳ ತಲೆಗೂ ಮಲ ತುಂಬದೆ ಇದ್ದಾವೆ ?

ನ್ಯಾಯಾಲಯ ನೌಕರ ಇನ್ನೊಬ್ಬ ಆರೋಪಿಯಂತೆ ನಿತ್ಯ ಅವನ ಅನ್ಯಾಯದ ಕೈಗಳು ಎಷ್ಟು ಜನರಿಗೆ ಪರೋಕ್ಷವಾಗಿ ಮಲ ತಿನ್ನಿಸಿರಬಹುದು ?

ಈ ಘಟನೆ ನಡೆದ ಮಾರನೆಯ ದಿನ ಅದೇ ಶಾಲೆಯ ಸಹ–ಉಪಾಧ್ಯಾಯರು ಇಂತಹ ನೀಚನ ಜತೆಗೆ ನಾವು ಕೆಲಸ ಮಾಡುವುದಿಲ್ಲ ಎಂತಲೂ ವಿದ್ಯಾರ್ಥಿಗಳು ಇಂತಹ ಮಾಸ್ತರನಿಂದ ನಾವು ಅಕ್ಷರ ಕಲಿಯುವುದಿಲ್ಲವೆಂತಲೂ, ಕರಿಕೋಟಿನ ನ್ಯಾಯದ ವಕ್ತಾರರು ಆ ನ್ಯಾಯಾಂಗ ನೌಕರನಿಗೆ 'ಛೀ ನೀಚ !' ಎಂತಲೂ ಉಗಿದು, ಛೀಮಾರಿ ಹಾಕಿಬಿಟ್ಟಿದ್ದರೆ ನನ್ನ ತಲೆ ಹೀಗೆ ರಾಡಿಯಾಗುತ್ತಿರಲಿಲ್ಲ.

ಇದರ ಸಾರಾಂಶವಿಷ್ಟೆ. ದಲಿತರು ಮಾನವ ವರ್ಗಕ್ಕೆ ಸೇರಿದವರಲ್ಲ. ಅವರು ಬೀದಿನಾಯಿಗಳಿಗೂ ಕಡೆಯಾದವರು ಎಂಬುದನ್ನು ಈ ಪವಿತ್ರ ರಾಷ್ಟ್ರ ಸಾಬೀತು ಮಾಡಿಬಿಟ್ಟಿತು. ಅವರ ಕಲ್ಲು ಹೃದಯ ಹಾಗೂ ಜಡ್ಡುಗಟ್ಟಿದ ಮಿದುಳು ತುಂಬಾ ಮಲ ತುಂಬಿದೆ ಎಂಬುದು ಜಗಜ್ಜಾಹೀರಾಯಿತು.

ಈ ಘೋರ ಅಂಧಕಾರದ ನಡುವೆಯೂ ಒಂದು ಬೆಳಕು. ದ.ಸಂ.ಸ. ನಾಡಿನ ಮೂಲೆ ಮೂಲೆಗಳಿಂದ ಹರಿದು ಬಂದಿದ್ದ ಸಾವಿರಾರು ನೋವಿನ ಕಪ್ಪು ಮುಖಗಳು, ಬತ್ತಿದ ಮೈ, ಕಾಂತಿಹೀನ ಕಣ್ಣುಗಳು–ಆದರೆ ಎದೆ ತುಂಬ, ಮಾನವ ಪ್ರೀತಿ, ಮನುಷ್ಯನ ಸಹಜ ಸಿಟ್ಟು, ಆಕ್ರೋಶ, ಪ್ರತಿಭಟನೆ – ಬೆಂಗಳೂರಿನ ಡಾಂಬರು ಬೀದಿಗಳಲ್ಲಿ ಮನುಷ್ಯರಾದವರ ಮೊರೆ. ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು. ತಮ್ಮಲ್ಲಿ ಉಳಿದಿರುವ ಏಕೈಕ ಆಸ್ತಿಯಾದ ಮನುಷ್ಯ ಪ್ರೇಮವನ್ನು ಎತ್ತಿಹಿಡಿದು ಹೋದರು. ದಲಿತರ ಅಂತರಾಳದ ಅಭಿವ್ಯಕ್ತಿ–ರಕ್ಷಾಕವಚ ಯಾವುದೇ ಸರ್ಕಾರವಲ್ಲ–ಪಕ್ಷವಲ್ಲ – 'ದಲಿತ ಸಂಘರ್ಷ ಸಮಿತಿ' ಎಂದು ಸಾರಿದರು. ಇನ್ನು ಈ ಜ್ಯೋತಿ ಆರಿ ಹೋಗದೆ. ಸದಾ ಉರಿಯುವಂತೆ ನೋಡಿಕೊಳ್ಳಬೇಕಾದ್ದು ಎಲ್ಲ ಮನುಷ್ಯರೆನ್ನಿಸಿಕೊಂಡವರ ಕರ್ತವ್ಯ.

ಡಿ. ಈರೇಶ್ ನಗರ್ಲೆ,
ನಂಜನಗೂಡು

ಾರತಮಾತೆಯ ನಾಲಿಗೆ ಮೇಲೆ ಅಸ್ಪೃಶ್ಯರಿಗೆ ಮಲ ತಿನ್ನಿಸಿದ ಘಟನೆ

ನಾಯಿಯು ತನ್ನ ಮಲವನ್ನು ತಾನು ತಿನ್ನುವುದಿಲ್ಲ,
ನುಷ್ಯರ ಮಲವನ್ನು ತಿನ್ನುತ್ತದೆ ಎಂಬ ನಿಜವು ಕಂದಮ್ಮ
ಗೂ ತಿಳಿದಿರುವ ಸಂಗತಿಯಾಗಿದೆ. ಮನುಷ್ಯನು ತನ್ನ ಮಲ
ನ್ನು ತಾನೇ ತಿನ್ನುತ್ತಾನೆ ಅಥವಾ ಇನ್ನೊಬ್ಬನಿಗೆ ತಿನ್ನಿಸುತ್ತಾನೆ
ಬುದು ಭೂಮಿಯ ಮೇಲೆ ಯಾರ ಕಲ್ಪನೆಗೂ ಬಾರದಿರುವ
ಗತಿಯೇ ಸರಿ. ಕಲ್ಪನೆಗೂ ಅಸ್ಪೃಶ್ಯವಾಗಿರುವ ಸಂಗತಿ
ನ್ನು ಸಂಪೂರ್ಣವಾಗಿ ಕಾರ್ಯಗತ ಮಾಡಿರುವುದು ಬೆಳಗಾಂ
ಲ್ಲೆಯ ಬೆಂಡಿಗೇರಿ ಗ್ರಾಮದಲ್ಲಿ. ಈ ಗ್ರಾಮದಲ್ಲಿ ಸವರ್ಣೀಯ
ನುಷ್ಯನು ಸಂಘಟಿತವಾಗಿ ಅಸ್ಪೃಶ್ಯ ಮನುಷ್ಯನಿಗೆ ಮಲ ತಿನ್ನಿ
ುವುದು ವಿಧಾನಸಭೆಯಲ್ಲಿ ಪ್ರಸ್ತಾಪವಾಗಿದೆ.

ಈ ವಿಷ ಗಳಿಗೆಯಲ್ಲಿ ಗಾಂಧೀಜಿಯವರ ಒಂದು ಹೇಳಿಕೆಯು
ಪಿಗೆ ಬರುತ್ತದೆ. ಅದೇನೆಂದರೆ "ಇನ್ನೊಂದು ಜನ್ಮದಲ್ಲಿ
ನು ಹರಿಜನನಾಗಿ ಹುಟ್ಟಬೇಕು ಎಂಬುದು...." ಈ ಹೇಳಿಕೆ
ಂದ ಗಾಂಧೀಜಿಯ ಪೂರ್ಣ ವ್ಯಕ್ತಿತ್ವ ತಿಳಿಯಲು ಆಗದಿದ್ದರೂ
ಮಾತಿನ ಹಿಂದಿನ ಮನಸ್ಸು ಯಾವ ರೀತಿಯದು ಎಂದು
ಕಕ್ಕೆ ಹಾಕಬಹುದು. ಅಸ್ಪೃಶ್ಯರ ತಲೆಯ ಮೇಲೆ ಮಲ
ರಿಸಿದಂತೆ ಸವರ್ಣೀಯ ಜನಾಂಗದ ಬನಿಯ ಕುಟುಂಬದ
ಸ್ಯರಾಗಿದ್ದ ಗಾಂಧೀಜಿಯವರಿಗೆ ಈ ರೀತಿ ಅನ್ನಿಸಿರಬಹುದು.
ಜನರ ತಲೆಯ ಮೇಲೆ ಮಲ ಹೊರಿಸಿದಂತ ಘೋರ ಅಪರಾಧ
ಗಿದ ಬನಿಯ ಕುಟುಂಬದಲ್ಲಿ ಹುಟ್ಟಿದ ನಾನು ಮನುಷ್ಯನಾಗಿಲ್ಲ
ತ್ತೊಮ್ಮೆ ಮನುಷ್ಯನಾಗಿ ಹುಟ್ಟಬೇಕಾಗಿದೆ, ತಲೆ ಮೇಲೆ ಮಲ
ರುವ ಅನುಭವದಿಂದಲೇ ಮನುಷ್ಯನಾಗಬೇಕಾಗಿದೆ ಆದ್ದರಿಂದ
ಜನನಾಗಿ ಹುಟ್ಟಬೇಕೆಂಬ ಬಯಕೆಯೂ ಬಂದಿರಬಹುದು.
ಗೆ ಗಾಂಧೀಜಿಯವರಿಗಿದ್ದ ಪ್ರಾಯಶ್ಚಿತ್ತ ಚಿತ್ತದಲ್ಲಿ ಈ ಅರಿವು
ದಿರಬಹುದು. ಕನಿಷ್ಠ ಪ್ರಾಯಶ್ಚಿತ್ತ ಚಿತ್ತವು ಇಲ್ಲದ ಇಂಡಿ
ಾದ ಮನುಷ್ಯನು ಒಂದು ದೆಸೆಯಾಗಿ ಗಾಂಧೀಯವರ ವಿಚಾರ
ಒಂದು ದೆಸೆಯಾಗಿ ಈ ದೇಶವು ದಿಕ್ಕಿಲ್ಲದಿರುವ ಈ ಸಂದರ್ಭ
ಲ್ಲಿ ಅಕಸ್ಮಾತ್ ಗಾಂಧೀಜಿಯವರ ಅನಿಸಿಕೆಯು ನಿಜವಾಗಿ
ಜನನಾಗಿ ಹುಟ್ಟಿ ಬಂದು "ಅಸ್ಪೃಶ್ಯತೆ ಹಿಂದೂ ಧರ್ಮದಲ್ಲಿನ
ಂಕವಾಗಿದೆ" ಎಂದು, ಮನುಷ್ಯನು ಮನುಷ್ಯನಿಗೆ ಮಲ ತಿನ್ನಿ
ವುದು ಘೋರ ಅನ್ಯಾಯವೆಂದು ಹೇಳಿದ್ದೇ ಆಗಿದ್ದರೆ,
ಂಧೀಜಿಯವರಿಗೂ ಮಲ ತಿನ್ನಿಸಿಬಿಡುತ್ತಿದ್ದರೋ ಏನೋ?

ಈ ದಿಕ್ಕೆಟ್ಟ ನಾಡಿನಲ್ಲಿ ಉಡುಪಿಯ ಮಠದ ವಿಶ್ವವಿಜಯ
ಸ್ವಾಮೀಜಿಯವರು ಸಮುದ್ರ ಪ್ರಯಾಣ ಮಾಡಿದ್ದು, ಹಿಂದೂ
ರ್ಮದ ವಿಧಿಯ ಉಲ್ಲಂಘನೆಯಾಯಿತು. ಅದಕ್ಕೆ ಶಿಕ್ಷೆಯೂ
ಯಿತು. ತಮಿಳು ನಾಡಿನಲ್ಲಿ ಅಸ್ಪೃಶ್ಯರು ಮುಸ್ಲೀಮರಾದ
ಚಾರ ಹಿಂದೂ ಮಠೀಯರ ಮನಸ್ಸಿನಲ್ಲಿ ಅಲ್ಲೋಲ ಕಲ್ಲೋಲ
ನ್ನೇ ಎಬ್ಬಿಸಿತು. ಸರ್ಕಾರದ ವಶದಲ್ಲಿರುವ ಎಲ್ಲ ಪ್ರಚಾರ
ಾಧ್ಯಮಗಳನ್ನೂ ಬಳಕೆ ಮಾಡಿ ಈ ಪ್ರಕರಣಗಳನ್ನು ಬೆಳಕಿಗೆ
ರಲಾಯಿತು. ಆದರೆ ಬೆಂಡಿಗೇರಿ ಗ್ರಾಮದಲ್ಲಿ ಮನುಷ್ಯನು
ನುಷ್ಯನಿಗೆ ಮಲ ತಿನ್ನಿಸಿದ ಪ್ರಕರಣ ಈ ದೇಶದ ಅಧ್ಯಕ್ಷರೂ
ಪ್ರಧಾನಮಂತ್ರಿಯವರಿಂದ ಹಿಡಿದು ರಾಜ್ಯದ ಮುಖ್ಯಮಂತ್ರಿಗಳ
ರೆವಿಗೂ, ಹಿಂದೂ ಧರ್ಮದ ಮಠೀಯರಿಂದ ಹಿಡಿದು ಬುದ್ಧಿ
ೀವಿಗಳವರೆವಿಗೂ ಯಾವುದೇ ಆತಂಕ ಉಂಟುಮಾಡಿದಂತೆ
ಡು ಬಂದಿಲ್ಲ. ಇದಕ್ಕೆ ಕಾರಣವೇನೆಂದರೆ, ಈ ಮೇಲ್ಕಂಡವರು
ಇಂಡಿಯಾದ ಜಾತೀಯತೆ, ಅಸ್ಪೃಶ್ಯತೆಯ ಯಮಪಾಶದಲ್ಲಿ ಬಂಧಿತರಾಗಿದ್ದಾರೆಂಬುದು.

ಹೀಗೆ ಬಂಧನಕ್ಕೊಳಗಾದ ಹಿಂದೂ ಪ್ರಜೆಗೆ ಭೂಮಿಗೆ ಗುರುತ್ವಾಕರ್ಷಣ ಶಕ್ತಿ ಇದೆ, ಭೂಮಿಯು ಸುತ್ತುತ್ತದೆ ಎಂಬ ಸತ್ಯಗಳನ್ನು ನ್ಯೂಟನ್ ಮತ್ತು ಗೆಲಿಲಿಯೋರವರು ತಿಳಿಸಬೇಕಾಗಿ ಬಂತು. ಸತ್ಯವು ಈ ರೀತಿ ಇರುವಾಗ 21ನೇ ಶತಮಾನಕ್ಕೆ ಮುಖಾ ಮಾಡಿರುವ ಇಂಡಿಯಾದ ಮನುಷ್ಯನಿಗೆ ಅಣುಬಾಂಬು, ಮಾನವ ಜನಾಂಗವನ್ನೇ ವಿನಾಶ ಮಾಡುತ್ತದೆ, ಮಲ ತಿನ್ನಿಸಿದ ಪ್ರಕರಣವು ಅಣುಬಾಂಬಿನಿಂದ ಉಂಟಾಗಬಹುದಾದ ವಿನಾಶಕ್ಕಿಂತ ಕ್ರೂರವಾದದ್ದೆಂದು ತಿಳಿಯಲು ಸಾಧ್ಯವೇ ಆಗಿಲ್ಲ. ಏಕೆಂದರೆ ನಮ್ಮ ಸರ್ಕಾರಿ ಆಡಳಿತವು, ಸಮಾಜದಲ್ಲಿನ ದಿನನಿತ್ಯದ ಚಟುವಟಿಕೆಗಳು ಕೇವಲ ಬ್ರಿಟೀಷರ ಪಳಿಯುಳಿಕೆ ಮಾತ್ರವಲ್ಲದೆ ಹಿಂದೂ ಧರ್ಮ ವಿಧಿಗಳನ್ನು ಕಾರ್ಯಗತ ಮಾಡುವ ಯಂತ್ರಗಳಾಗಿರುವುದರಿಂದ. ಈ ಹಿಂದೂ ಧರ್ಮದ ನಿರ್ದೇಶನ ತತ್ವಗಳು ಎಂತಹವೆಂದರೆ, ಒಬ್ಬನು ಇನ್ನೊಬ್ಬನನ್ನು ಮುಟ್ಟಬಾರದೆಂಬುದು, ಗಂಡನನ್ನು ಕಳೆದುಕೊಂಡ ಹೆಣ್ಣು ಬೆಂಕಿಯ ಪಾಲಾಗಬೇಕು ಅಥವಾ ತಲೆಬೋಳಿಸಿಕೊಂಡಿರಬೇಕು, ಗೋಹತ್ಯೆ ಮಹಾಪಾಪ ಮುಂತಾಗಿ ಇವೆ. ಈ ನಿರ್ದೇಶನ ತತ್ವಗಳು ಹಿಂದೂ ಮನುಷ್ಯನ ದೇಹ ಮನಸ್ಸಿನ ಪ್ರಯೋಗಾಲಯದಲ್ಲಿ ಅಜ್ಞಾನ ಮತ್ತು ದ್ವೇಷ ರಸಾಯನಿಕ ಕ್ರಿಯೆಯಿಂದ ಉತ್ಪತ್ತಿಯಾಗಿರುವ ಆತ್ಮವಾಗಿದೆ.

ಈ ಅಜ್ಞಾನ ಮತ್ತು ದ್ವೇಷವು ಸವರ್ಣೀಯ ಮನುಷ್ಯ ಹಾಗೂ ಅಸ್ಪೃಶ್ಯ ಮನುಷ್ಯನಲ್ಲಿ ಸಮಾನವಾಗಿ ಹಂಚಿಕೆಯಾಗಿದೆ. ಆದ್ದರಿಂದಲೇ ಮನುಷ್ಯನು ಮನುಷ್ಯನಿಗೆ ಮಲ ತಿನ್ನಿಸುವ ಮಟ್ಟಕ್ಕೆ ಇಳಿದಿರುವುದು. ಅದು ಹೇಗೆಂದರೆ ಹಿಂದೂ ಸಮಾಜದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಬ್ರಾಹ್ಮಣನು ನಾನು ಶ್ರೇಷ್ಠನೆಂದು ಅಸ್ಪೃಶ್ಯನು ನಾನು ಶ್ರೇಷ್ಠನಲ್ಲವೆಂದು, ಅಸ್ಪೃಶ್ಯತೆ ಆಚರಣೆ ಮಾಡುವವನು ನಾನು ಅಸ್ಪೃಶ್ಯತೆ ಆಚರಣೆ ಮಾಡುತ್ತಿದ್ದೇನೆಂದು ತಿಳಿಯದೇ ಇರುವುದು, ಅಸ್ಪೃಶ್ಯನು ನಾನು ಅಸ್ಪೃಶ್ಯತೆಗೆ ಒಳಗಾಗಿದ್ದೇನೆಂದು ತಿಳಿಯದೆ ಇರುವ ನಿರಂತರ ಕ್ರಿಯೆ ಮತ್ತು ಪ್ರಕ್ರಿಯೆಗೆ ಈ ಅಜ್ಞಾನ ಮತ್ತು ದ್ವೇಷ ಮೂಲವಾಗಿವೆ.

ಈ ಪ್ರಕಾರವಾಗಿ ಹುಟ್ಟಿಕೊಂಡಿರುವ ಅಜ್ಞಾನ ಮತ್ತು ದ್ವೇಷದ ಸಂಕೋಲೆಯಿಂದ ಮನುಷ್ಯನನ್ನು ಬಿಡುಗಡೆ ಮಾಡಲು ಸರ್ಕಾರ ಹಾಗೂ ಹಿಂದೂ ಮಠೀಯರಲ್ಲಿ ಯಾವುದೇ ಕಾರ್ಯಕ್ರಮ ಮತ್ತು ವಿಚಾರ ಇಲ್ಲದಿರುವ ಕಾರಣ, ಇಂಡಿಯಾದ ಪ್ರತಿಪ್ರಜೆಯೂ ಸುಖನಿದ್ರೆಯಲ್ಲಿರಲಿ ಈ ನಿದ್ದೆಯು ಒಂದು ಕನಸು ಬರುವಂತೆ ಮಾಡಲಿ, ಈ ಕನಸಿನಲ್ಲಿ ಪ್ರತಿಪ್ರಜೆಯು ತನ್ನ ಹೇಲನ್ನು ತಾನೇ ತಿನ್ನುತ್ತಿರುವುದು ಕಂಡುಬರಲಿ. ಈ ದುಸ್ವಪ್ನವು ಇಂಡಿಯಾದ ಮನುಷ್ಯನನ್ನು ನಿದ್ದೆಯಿಂದ ಎಚ್ಚರಿಸಲಿ ಈ ಎಚ್ಚರವು ಅಜ್ಞಾನ ಮತ್ತು ದ್ವೇಷದ ಬೀಜದಿಂದ ಹುಟ್ಟಿರುವ ಜಾತೀಯತೆ, ಅಸ್ಪೃಶ್ಯತೆ ಎಂಬ ಮರದ ಕೊಂಬೆಗಳನ್ನು ಕಡಿದು ಮತ್ತೆ ಚಿಗುರುವಂತೆ ಮಾಡದಿರಲಿ. ಬದಲಾಗಿ ಈ ಮರವನ್ನು ಬೇರು ಸಮೇತ ಕಿತ್ತೆಸೆದು ಅದೇ ಸ್ಥಳದಲ್ಲಿ ಮನುಷ್ಯ ಪ್ರೇಮ-ಅನುಕಂಪಗಳ ಬೀಜ ಬಿತ್ತಿ ಫಲ ಪಡೆಯುವಂತಾಗಲಿ ಎಂದು ಆಶಿಸದೆ ಮತ್ತೇನೂ ಉಳಿದಿಲ್ಲ.

-ಕೆ. ಬಿ. ಸಿದ್ದಯ್ಯ

ಸಸರಾಂ ಜೈಲಿನಲ್ಲಿ ದಲಿತ ಖೈದಿಗಳೇಕೆ ಸಾಯುತ್ತಾರೆ?

ಜಾತಿಯವಿಷ ಸರಳುಗಳ ಹಿಂದೆಯೂ ಹರಿದು ಹೋಗಿದೆ. ಈ ವಿಷವ ಎದೆಯಲ್ಲಿಟ್ಟುಕೊಂಡ ಜೈಲು ಸಿಬ್ಬಂದಿ ಅಲ್ಲಿಗೆ ಖೈದಿಗಳಾಗಿ ಬರುವ ದಲಿತರನ್ನು ಕಚ್ಚಿಕೊಲ್ಲತೊಡಗಿದ್ದಾರೆ. ಈ ಕಡಿತಕ್ಕೆ ಬಲಿಯಾಗಿ ಒಂದೇ ವರ್ಷದಲ್ಲಿ 7 ಜನ ದಲಿತ ಖೈದಿಗಳು ಮೃತಪಟ್ಟಿದ್ದಾರೆ.

ಹಗಲೆಲ್ಲಾ ಅತ್ಯಂತ ಕಠಿಣ ಕೀಳು ಕೆಲಸಗಳನ್ನು ಕೊಡುವುದು, ಚಿತ್ರಹಿಂಸೆ, ದೌರ್ಜನ್ಯ ಮಾಡುವುದು. ಇಷ್ಟೂ ಸಾಲದೆಂಬಂತೆ ರಾತ್ರಿ ಮಲಗಲು ಕೂಡಾ ಜಾಗಕೊಡದಿರುವುದು ಈ ಜಾತಿವಾದಿ ಸಿಬ್ಬಂದಿಯ ಬರ್ಬರ ಕೃತ್ಯಗಳು.



ಮಂಚಕ್ಕೆ ಕಟ್ಟಿ ಹಾಕಿದ ದಲಿತ ಖೈದಿ ಮೋಹನ್ ಮುಷಾಹರ

ಬಿಹಾರದ ಸಸರಾಂ ಜೈಲಿನಲ್ಲಿ 1983ರ ನವೆಂಬರ್ ತಿಂಗಳಿಂದ ಈಚೆಗೆ ಸುಮಾರು 16 ಜನ ದಲಿತರು ಮರಣಿಸಿದ್ದಾರೆ. ಇವರೆಲ್ಲಾ ಜೈಲು ಅಧಿಕಾರಿಗಳು ನೀಡಿದ ಚಿತ್ರಹಿಂಸೆಯ ಪರಿಣಾಮವಾಗಿ ಸತ್ತಿದ್ದಾರೆ. ಇವರ ಸಾವಿಗೆ ಇವರು ದಲಿತರಾಗಿ ಹುಟ್ಟಿದ ಏಕಮಾತ್ರ ಅಪರಾಧವೇ ಕಾರಣ. ಇಲ್ಲಿ ದಲಿತ ಖೈದಿಗಳು ಬಂದ ಕೂಡಲೇ ಅವರನ್ನು ನಾನಾ ರೀತಿಯ ಹಿಂಸೆ, ದೌರ್ಜನ್ಯ, ಚಿತ್ರಹಿಂಸೆಗೆ ಒಳಗುಮಾಡಿ ಕ್ರಮೇಣ ಕೊಂದು ಹಾಕುವ ವ್ಯವಸ್ಥಿತ ಜಾಲವೊಂದು ಕೆಲಸ ಮಾಡುತ್ತಿದೆ.

ಸುಮಾರು ದಲಿತ ಖೈದಿಗಳು ಜೈಲಿನಲ್ಲಿಯೇ ಸತ್ತು ಹೋಗಿದ್ದರೂ ಅವರು ಆಸ್ಪತ್ರೆಯಲ್ಲಿ ಸತ್ತರೆಂಬ ಸುಳ್ಳು ದಾಖಲೆಗಳನ್ನು ಸೃಷ್ಟಿಸಲಾಗಿದೆ. ಉದಾಹರಣೆಗೆ ಸುರೇಶ್‌ಕಾರ್‌ವಾರ್‌ನನ್ನು ಕಳೆದ ವರ್ಷ ಮೇ. 21 ರಂದು ಜೈಲಿಗೆ ಕರೆತರಲಾಯಿತು. ಆತನನ್ನು ಅನಾರೋಗ್ಯದ ಕಾರಣ ಕೊಟ್ಟು ಜೂನ್ 5 ರಂದು ಆಸ್ಪತ್ರೆಗೆ ಸೇರಿಸಲಾಯಿತು. ಇದಾದ ಕೇವಲ ಐದೇ ಐದು ಗಂಟೆಗಳಲ್ಲಿ ಆತ ಸತ್ತನೆಂದು ಘೋಷಿಸಲಾಯಿತು. ಸಾವಿಗೆ ಕಾರಣ 'ಫ್ಲೂ' ಎಂದೂ ನಮೂದಿಸಲಾಯಿತು. ಜೈಲು ಸಿಬ್ಬಂದಿಯಲ್ಲಿ ಒಬ್ಬ ಸತ್ಯವನ್ನು ಅದುಮಿಡಲಾರದವ "ಸುರೇಶ್ ಕಾರ್‌ವಾರ್ ಜೈಲಿನಲ್ಲಿಯೇ ಸತ್ತು ಹೋದನೆಂದೂ ಅನಂತರ ಅವನ ಹೆಣವನ್ನು ಆಸ್ಪತ್ರೆಗೆ ಕೊಂಡೊಯ್ದರೆಂದೂ" ಒಪ್ಪಿಕೊಂಡ.

ಜೈಲಿನಲ್ಲಿ ಸತ್ತ ಇತರ ದಲಿತ ಖೈದಿಗಳ ಪಟ್ಟಿ ಹೀಗಿದೆ—

ತೆಂಗರ್ ಮುಷಾಹರ್ (ಫೆಬ್ರುವರಿ 14, 1984)
ಬೂತನ್ ಮುಷಾಹರ್ (ಏಪ್ರಿಲ್ 13. 1984)
ಕವ್ಲಾ ಮುಷಾಹರ್ (ಏಪ್ರಿಲ್ 11, 1984)
ಸನ್ವೀರ ಮುಷಾಹರ್ (ಏಪ್ರಿಲ್ 13, 1984)
ಶ್ಯಾಂ ಬಿಹಾರಿ ಮುಷಾಹರ್ (ಮೇ 24, 1984)
ಯಾಜಿ ಮುಷಾಹರ್ (ಸೆ. 29, 1984)

ಅಂದರೆ ಒಂದೇ ವರ್ಷದಲ್ಲಿ ಏಳು ಮಂದಿ ಖೈದಿಗಳು ಸತ್ತಿದ್ದಾರೆ. ಒಂದೇ ತಿಂಗಳಲ್ಲಿ ಎರಡೇ ದಿನಗಳ ಅವಧಿಯಲ್ಲಿ ಮೂರು ಜನ ದಲಿತರು ಸತ್ತಿದ್ದಾರೆ.

ಕಿಷನ್‌ರಾಮ್ ಎಂಬ ಖೈದಿಯನ್ನು ಆಗಸ್ಟ್ 15. 1985 ರಂದು ಜೈಲಿಗೆ ತಂದರು. ಆತನನ್ನು ಆಸ್ಪತ್ರೆಗೆ ಸೇರಿಸಿದ್ದು ಕಳೆದ ವರ್ಷ ಜೂನ್ 5 ರಂದು. ಅಂದು 4 ಗಂಟೆಗೆ ಆತ ಮರಣಿಸಿದ. ಲಾಲ್‌ಮುನಿ ಚಮರ್‌ನದೂ ಇದೇ ಕತೆ. ಅತನನ್ನು ಕಳೆದ ವರ್ಷ ಮಾರ್ಚ್ 31 ರಂದು ಜೈಲಿಗೆ ತಂದು ಜೂನ್ 4ಕ್ಕೆ ಆಸ್ಪತ್ರೆಗೆ ಸೇರಿಸಿದರು. ಇದಾದ ನಾಲ್ಕು ಗಂಟೆಗಳ ನಂತರ ಆತ ಮೃತಪಟ್ಟ. ಸನಿಚಾರ್ ಮುಷಾಹರ್ ಕೂಡ ಆಸ್ಪತ್ರೆಗೆ ಸೇರಿದ ಮೂರೇ ಗಂಟೆಗಳ ನಂತರ ಮೃತಪಟ್ಟ. ಈತನನ್ನು ಕಳೆದ ವರ್ಷ ಮಾರ್ಚ್ 31 ರಂದು ಆಸ್ಪತ್ರೆಗೆ ತರಲಾಯಿತು. ಆಸ್ಪತ್ರೆಗೆ ಸೇರಿಸಿದ್ದು ಜೂನ್ 21 ರಂದು. ಮೂರೇ ಗಂಟೆಗಳ ನಂತರ ಮರಣಿಸಿದ. ಈ ಎಲ್ಲ ಸಾವಿಗೆ ಅಧಿಕಾರಿಗಳು ಕೊಟ್ಟಿರುವ ಕಾರಣ 'ಫ್ಲೂ'.

ಎರಡು ವರ್ಷಗಳ ಹಿಂದೆ ಅನೇಕ ದಲಿತ ಖೈದಿಗಳು ಜೈಲು ಸಿಬ್ಬಂದಿ ತಮಗೆ ಅತೀವ ಚಿತ್ರಹಿಂಸೆ ನೀಡುತ್ತಿದ್ದಾರೆ ಎಂದು ಜಿಲ್ಲಾ ನ್ಯಾಯಾಧೀಶರಿಗೆ ದೂರು ಕೊಟ್ಟಿದ್ದರು. ಅದೇ ಸಂದರ್ಭದಲ್ಲಿ ಜೈಲು ಸಿಬ್ಬಂದಿಯಲ್ಲಿ ಕೊಂಚ ಮಾನವೀಯತೆ ಉಳಿ ಕೊಂಡಿದ್ದ ಸಹಾಯಕ ಜೈಲು ಅಧಿಕಾರಿ ನಂ ಕಿಶೋರ್‌ಸಿಂಗ್ ಇಂತಹದ್ದೇ ದೂರೊಂದನ್ನು ನೀ ದ್ದರು.

ಅವರು ಜೈಲಿನಲ್ಲಿ ದಲಿತ ಖೈದಿಗಳಿಗೆ ನೀಡು ಹಿಂಸೆ, ಕಿರುಕುಳ, ಚಿತ್ರಹಿಂಸೆಯ ಬಗ್ಗೆ ಸುಳಿ ಕೊಟ್ಟಿದ್ದರು. ದಲಿತ ಖೈದಿಗಳಿಗೆ ದಿನವೆಲ ಕಠಿಣ ಮತ್ತು ಕೊಳಕಾದ ಕೆಲಸ ನೀಡುತ್ತಿರುವುದನ ಮೇಲ್ಜಾತಿ ಖೈದಿಗಳ, ಸಿಬ್ಬಂದಿಗಳ ಕಾಲ ಬಳಿ ಸದ ಗುಲಾಮರಂತೆ ನಿಂತು ಸೇವೆ ಮಾಡಬೇಕಾದ ದುಸ್ಥಿ ಯನ್ನು, ಹೀಗೆ ದಿನವೆಲ್ಲ ದುಡಿದು ದಣಿದರೂ ರಾ ಮಲಗಲು ಕೂಡ ಜಾಗ ಕೊಡದೆ ಪೀಡಿಸುತ್ತಿರು ವುದನ್ನೂ ಸರ್ಕಾರದ ಗಮನಕ್ಕೆ ತಂದರು.

ಕೇವಲ 72 ಜನರಿಗೆ ಮಾತ್ರ ಸ್ಥಳಾವಕಾಶ ಇರು ಈ ಜೈಲಿನಲ್ಲಿ 495 ಖೈದಿಗಳನ್ನು ತುಂಬಲಾಗಿದ ಜೈಲು ತುಂಬಿ ತುಳುಕುತ್ತಿದೆ. ಪರಿಣಾಮ ಕೆಳ ಜಾ ಖೈದಿಗಳಿಗೆ ಕೂರಲು ಕೂಡ ಜಾಗ ದೊರೆಯುವುದಿಲ್ಲ ಅವರು ಬೇರೆ ದಾರಿಯಿಲ್ಲದೆ ಕಕ್ಕಸು ರೂಂಗಳಲ್ಲಿ ನಿಂತ ಕೊಂಡೇ ರಾತ್ರಿ ಕಳೆಯುತ್ತಾರೆ. ಸ್ಥಳಾಭಾವವನೆ ಆಧಾರ ಮಾಡಿಕೊಂಡ ಮೇಲು ಜಾತಿ ಜೈಲು ಸಿಬ್ಬಂ ದಲಿತರಿಗೆ ನಾನಾ ಚಿತ್ರಹಿಂಸೆ ಕೊಡುತ್ತಿದ್ದಾರೆ.

ವಾರ್ಡ್‌ಗಳನ್ನು ಹರಾಜು ಹಾಕಿ ಯಾರು ಹೆಚ ದುಡ್ಡು ಕೊಡುತ್ತಾರೋ ಅವರಿಗೆ ನೀಡಲಾಗುತ್ತದ ಈ ವಾರ್ಡುಗಳ ಮೇಲ್ವಿಚಾರಕರು ಮೇಲು ಜಾ

(14ನೇ ಪುಟಕ್ಕೆ)

ಾಹ್ಮಣಾತಿ ಹೊಟ್ಟೆಯಲ್ಲಿ ಹುಟ್ಟಿದ ಹೋರಿಯು

. ಎಂ. ಅಬ್ರಹಾಂ ಆಯಿರು ಕುಯಿಲ್
ನಂದ ತೀರ್ಥರು. ತಮ್ಮ ಇಡೀ ಜೀವನ
ಅಸ್ಪೃಶ್ಯತೆಯು ವಿರುದ್ಧ ನಡೆಸಿದ ಹೋರಾ
ಣ ಮತ್ತು ಆನಂದ ತೀರ್ಥರ ಜೀವನ
ನ್ನು ಅತ್ಯಂತ ಸಮರ್ಥವಾಗಿ ಬರೆದಿದ್ದಾರೆ.
ಕ ಇಂಡಿಯಾದ ಜಾತಿ ಪದ್ಧತಿ ಮತ್ತು
ತೆಯು ನಿವಾರಣೆಗೆ ಇರುವ ಅನೇಕ ಸಾಧ್ಯತೆ
ನಮ್ಮ ಮುಂದಿಡುತ್ತದೆ. ಅಸ್ಪೃಶ್ಯರ
ದಲಿತರ ಸಾಂಸ್ಕೃತಿಕ, ಆರ್ಥಿಕ ಸಮಸ್ಯೆಗಳ
ತಳುಕು ಹಾಕಿಕೊಂಡಿರುವುದನ್ನು ತಿಳಿಸು
ಈ ಪುಸ್ತಕ ಒಂದು ಸಾಮಾಜಿಕ–ಸಾಂಸ್ಕೃತಿಕ
ನವಲ್ಲದೆ ಗಾಂಧಿವಾದ, ಅಂಬೇಡ್ಕರ್‌ವಾದ
ಶರ್ಾತ್ಮಕ ಪರಿಚಯವೂ ಹೌದು.

ು ಆನಂದ ತೀರ್ಥ 1905ರ ಜನವರಿ 3
ಲ್ಲಿಚೇರಿಯು ಗೌಡ ಸಾರಸ್ವತ ಬ್ರಾಹ್ಮಣರ
ದವರಾದ ರಾವ್‌ಸಾಹೇಬ್ ರಾಮಚಂದ್ರ
ಮತ್ತು ದೇವಿ ಅಮ್ಮಾಳ್ ಅವರ ಐದನೇ
ಪರಮ ದೈವಭಕ್ತೆಯಾದ ಇವರ ತಾಯಿ
ಲೆಯು ಹೇಗೆ ನನ್ನ ಹೊಟ್ಟೆಯಲ್ಲಿ ಹುಟ್ಟಿದ'
ಉದ್ಗರಿಸಿದ್ದೂ ಉಂಟು. ಹೀಗೆಂದು ತಮ್ಮ
ಆನಂದರು ಬರೆದುಕೊಂಡಿದ್ದಾರೆ.

ು.ಆನಂದ ತೀರ್ಥರು ಮಹಾತ್ಮಾ ಗಾಂಧಿ
ಕಟ್ಟಾ ಅನುಯಾಯಿ. ಇಂಡಿಯಾದ ಅನೇಕ
ಗಳ ಮಧ್ಯೆ ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿ
ಕ್ರೂರ ಪದ್ಧತಿಗಳೆಂಬುದನ್ನು ಮನಗಂಡವರು.
ಂದ ಬ್ರಾಹ್ಮಣನಾದರೂ ಆಚರಣೆಯಲ್ಲಿ
ರ ಮಾನವತಾವಾದಿಯಾಗಿ ಅಸ್ಪೃಶ್ಯತೆಯ
ಹೋರಾಟಗಳನ್ನು ರೂಪಿಸಿ ಅನೇಕ ರೀತಿಯ
ರ್ಷಣ್ಯಗಳಿಗೆ ಒಳಗಾಗಿ ನೈಜ ದೇಶಭಕ್ತಿಯಲ್ಲಿ
ದರು.


ದ ತೀರ್ಥರು ತಮ್ಮ ಹೋರಾಟದ ಕ್ಷೇತ್ರವಾಗಿ
ಮೇಲೂರು ಪ್ರದೇಶವನ್ನು ಆಯ್ದುಕೊಂಡಿ
1932ರ ಸೆಪ್ಟೆಂಬರ್ 30 ರಂದು ಸ್ಥಾಪನೆ
ಗಾಂಧೀಜಿಯವರ 'ಹರಿಜನ ಸೇವಕ ಸಂಘ'ದ
ಸದಸ್ಯರಾಗಿ ಹೋರಾಟವನ್ನು ಪ್ರಾರಂಭಿಸಿ
1932 ಸ್ವಾತಂತ್ರ್ಯ ಹೋರಾಟ ಬಿಸಿಯಾಗಿದ್ದ
ಸ್ವಾತಂತ್ರ್ಯ ಹೋರಾಟದ ಅಗತ್ಯವನ್ನು ಮನ
ಆನಂದ ತೀರ್ಥರು ಅಸ್ಪೃಶ್ಯತೆ ಮತ್ತು ಜಾತಿ
ದ ಹೋರಾಟ ಸ್ವಾತಂತ್ರ್ಯ ಹೋರಾಟದಷ್ಟೇ
ಪೂರ್ಣ ಹೋರಾಟವೆಂದು ಮನಗಂಡಿದ್ದ ಅವ
ರ ಸಮಾಜ ಸೇವಾಕರ್ತರಾಗಿದ್ದರು.

ರ ಹರಿಜನ ವಿಮೋಚನೆಯ ನಿಷ್ಠೆಗೆ 1930ರಲ್ಲಿ
ಘಟನೆಯನ್ನು ನೋಡಬಹುದು. ಸತ್ಯಾಗ್ರಹ

ಯಾಗಿದ್ದ ಇವರನ್ನು ಬಂಧಿಸಿ ನ್ಯಾಯಾಲಯಕ್ಕೆ ಒಯ್ದಿದ್ದರು. ನ್ಯಾಯಾಧೀಶರು ಇವರನ್ನು ನೀವು ಹೇಳುವುದೇನಾದರೂ ಇದೆಯೇ ? ಎಂದು ಪ್ರಶ್ನಿಸಿ ಅದಕ್ಕುತ್ತರವಾಗಿ ಆನಂದ ತೀರ್ಥರು "ನಾನು ಎರಡು ವಿಷಯಗಳಿಗಾಗಿ ಬದುಕುತ್ತೇನೆ. ಮೊದಲನೆಯದು ಅಸ್ಪೃಶ್ಯತೆ ಮತ್ತು ಜಾತಿ ವಿರುದ್ಧ ಹೋರಾಡುವುದಕ್ಕಾಗಿ, ಎರಡನೆಯದು ಬ್ರಿಟಿಷರ ಆಳ್ವಿಕೆ ಕೊನೆಗೊಳಿಸುವುದಕ್ಕಾಗಿ ಎಂದರು.

1930ರಲ್ಲಿ ಕಾಂಗ್ರೆಸ್ **Civil disobidience movement**ನ್ನು ಪ್ರಾರಂಭಿಸಿತು. ರಾಜಗೋಪಾಲಚಾರಿಯವರ ಜೊತೆ ಆನಂದ ತೀರ್ಥರು ಜಾಥಾದ ಉದ್ದಕ್ಕೂ ಹರಿಜನ ಮಕ್ಕಳನ್ನು ಸಾರ್ವಜನಿಕ ಕೆರೆ ಬಾವಿಗಳಲ್ಲಿ ಸ್ನಾನ ಮಾಡಿಸುವುದು, ಅವರಿಗೆ ಸಮಾನತೆಯ ವಿಚಾರಗಳನ್ನು ಬೋಧಿಸುವುದನ್ನು ಮಾಡುತ್ತಿದ್ದರು. ಒಮ್ಮೆ ರಾಜಾಜಿಯವರನ್ನು ಹರಿಜನರೇಕೆ ಪ್ರತ್ಯೇಕವಾಗಿದ್ದಾರೆ ? ಅವರನ್ನು ಇತರರೊಟ್ಟಿಗೆ ಸೇರಿಸುವುದು ಸಾಧ್ಯವಿಲ್ಲವೇ ? ಎಂದು ಕೇಳಿದರು. ಆಗ ರಾಜಾಜಿಯವರು 'ನಾನು ಇದನ್ನು ಒಪ್ಪಿಕೊಳ್ಳುತ್ತೇನೆ. ಹೀಗೆ ಮಾಡಲು ಪ್ರಯತ್ನಿಸುವುದರಿಂದ, ಅನೇಕ ರೀತಿಯ ಸಮಸ್ಯೆಗಳಿಗೆ ಕಾರಣವಾಗುತ್ತದೆ. ನಿಮಗೆ 'ಅದರಲ್ಲೇ ಇಷ್ಟವಿದ್ದರೆ ನೀವು ಇಲ್ಲೇ ಇದ್ದು ಬಿಡಿ. ಅಥವಾ ಸುಮ್ಮನೆ ನಮ್ಮ ಜೊತೆ ಬನ್ನಿ' ಎಂದರು.

ಪುಸ್ತಕ ಪರಿಚಯ



ಆದರೆ ಆನಂದ ತೀರ್ಥರು ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆ ವಿರುದ್ಧ ಹೋರಾಡದಿದ್ದರೆ ಸ್ವಾತಂತ್ರ್ಯ ಹೋರಾಟ ಅರ್ಥಪೂರ್ಣವಾಗುವುದಿಲ್ಲ ಎಂದು ಮನಗಂಡಿದ್ದರು. ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೂ ಅಸ್ಪೃಶ್ಯತೆಯ ನಿವಾರಣೆಗೂ ಅಂತರವಿದೆಯೆಂದೂ ತಿಳಿದಿದ್ದರು. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಆರ್ಟಿಕಲ್ 17ನ್ನು ಬಹಳ ಮುಂದಾಲೋಚನೆಯಿಂದ ಸೇರಿಸಿದ್ದಾರೆ. ನಿಮ್ಮಂಥ ಕಾಂಗ್ರೆಸ್ಸಿಗರು ಅಸ್ಪೃಶ್ಯತೆ ವಿರುದ್ಧದ ಹೋರಾಟವನ್ನು ಮುಟ್ಟುವುದಿಲ್ಲವೆಂದು ಅವರು ನಿರೀಕ್ಷಿಸಿದ್ದಾರೆಂದು ಹೇಳುತ್ತಾ ಕಾಂಗ್ರೆಸ್ಸಿಗರನ್ನು ಚುಚ್ಚುತ್ತಿದ್ದರು.

ಕೇರಳದ ಮೇಲೂರು ಪ್ರದೇಶದಲ್ಲಿ ದೇವಸ್ಥಾನ, ಪ್ರವೇಶ, ಹೋಟೆಲ್ ಮತ್ತು ಸಾರ್ವಜನಿಕ ಸ್ಥಳಗಳ ಪ್ರವೇಶ ಮಾಡಿಸುವಲ್ಲಿ ಮುಂದಾಗಿದ್ದ ಆನಂದರಿಗೆ ಆ ಪ್ರದೇಶದ ಹರಿಜನ ಕಾಂಗ್ರೆಸ್ ಮುಖಂಡರಾದ ಶ್ರೀ ಪಕ್ಕೇನ್ ಎಂಬುವರು ನಿಮ್ಮ ಕೆಲಸ ಕಾರ್ಯಗಳನ್ನು ನಿಲ್ಲಿಸಬೇಕೆಂದು ಕೇಳಿಕೊಂಡರು. ಕಾರಣ ಮೇಲ್ಜಾತಿಯ ಜನರು ಈ ಥರದ ಕಾರ್ಯಕ್ರಮಗಳಿಂದ ಅಸಮಧಾನಗೊಂಡು ತನಗೆ ಮತವನ್ನು ಹಾಕುವುದಿಲ್ಲವೆಂಬ ಸ್ವಾರ್ಥದಿಂದ. ಆನಂದ ತೀರ್ಥರ ಕಾರ್ಯಕ್ಷೇತ್ರವನ್ನು ಬೇರೆ ಕಡೆಗೆ ವರ್ಗಾಯಿಸಿಕೊಳ್ಳಬೇಕೆಂದು ಒತ್ತಾಯಿಸಿದರು. 1962 ಜನವರಿ 4 ರಂದು ಮಂಗಳಂ ಪ್ರದೇಶದಲ್ಲಿ ಬ್ರಾಹ್ಮಣರ ಹೋಟೆಲಿನ ವಿರುದ್ಧ ರಿಜಿಸ್ಟರ್ ಮಾಡಿಸಿದ್ದ ದೂರನ್ನು ವಾಪಸ್ಸು ಪಡೆಯುವಂತೆ ಆ ಪ್ರದೇಶದ ಹರಿಜನ ಎಂ. ಎಲ್.ಎ. ಶ್ರೀ ಶಿವಪ್ರಕಾಶಂ ಮತ್ತು ಎಂ. ಪಿ. ಶ್ರೀ ಕಕ್ಕೇನ್ ಒತ್ತಡ ತಂದರು. ಆದರೂ ಇವರ ಹೋರಾಟಗಳಿಂದ ಕೇರಳದ ನೂರಾರು ಹಳ್ಳಿಗಳಲ್ಲಿ ಸಾಮಾಜಿಕ ಬಹಿಷ್ಕಾರ ಹಾಕಲಾಗಿತ್ತು.

1971ರ ಜನವರಿ 30 ರಂದು ದುರ್ಗಾ ಪರಮೇಶ್ವರಿ ದೇವಸ್ಥಾನ ಪ್ರವೇಶ ಕಾರ್ಯಕ್ರಮ ಮಾಡಿದರು. ಮರುದಿನ ಆನಂದ ತೀರ್ಥರು ಕುತೂಹಲಕ್ಕಾಗಿ ಆ ದೇವಸ್ಥಾನಕ್ಕೆ ಹೋಗಿದ್ದಾಗ, ಅಲ್ಲಿ ಕಾಯುತ್ತಿದ್ದ ಬ್ರಾಹ್ಮಣ ಯುವಕರು ಇವರು ಸಾಯುವವರೆಗೆ ಹೊಡೆದು ಸುಟ್ಟು ಹಾಕಲು ಪೆಟ್ರೋಲ್ ತರುತ್ತಿದ್ದರು. ಅಷ್ಟರಲ್ಲಿ ದಾರಿಯಲ್ಲಿ ಬರುತ್ತಿದ್ದ ಕಾರೊಂದು ಇವರನ್ನು ರಕ್ಷಿಸಿ ಆಸ್ಪತ್ರೆಗೆ ಸೇರಿಸಿತು. ಆನಂದ ತೀರ್ಥರು ತಮ್ಮ ನೆನಪಿನಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ನಾನು ಎಂದೂ ಪೆಟ್ಟು ತಿಂದವನಲ್ಲ ಆದರೆ ಇಲ್ಲಿ ನನ್ನ ಪ್ರಾಣಕ್ಕೆ ಸಂಚಕಾರ ಬಂದ ಸಂದರ್ಭಗಳು ಎಷ್ಟೋ ಎಂದು ನೆನೆಸಿಕೊಂಡಿದ್ದಾರೆ.

ಕೇರಳದ ಸಮಾಜ ಸುಧಾರಕರಾಗಿದ್ದ ಶ್ರೀ ನಾರಾಯಣ ಗುರುಗಳಿಂದ ಸ್ಥಾಪನೆಯಾಗಿದ್ದ 'ನಾರಾಯಣ

(15ನೇ ಪುಟಕ್ಕೆ)

ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಮಂದಿ ಬಡತನದ ರೇಖೆಗಿಂತಲೂ ಕೆಳಗೆ ಜೀವಿಸುತ್ತಾರೆ ಎಂಬುದು ವಾಸ್ತವ ಸತ್ಯ. ಇಂತಹ ದುರವಸ್ಥೆಗೆ ನಮ್ಮನ್ನು ದೂಡಿರುವುದು ಯಾವುದು ? ಈ ದೇಶದ ಮೂಲನಿವಾಸಿಗಳು ಯಾರು ಎನ್ನುವುದನ್ನು ಸ್ಪಷ್ಟವಾಗಿ ಗುರುತಿಸಲು ನಮ್ಮ ಇತಿಹಾಸಕ್ಕೆ ಸಾಧ್ಯವಾಗಿಲ್ಲ.

ನಮಗೆ ಸಧ್ಯಕ್ಕೆ ದೊರಕಿರುವ ಆಧಾರಗಳ ಮೇಲೆ ಆರ್ಯರು ಇಲ್ಲಿಗೆ ಬರುವುದಕ್ಕೂ ಮೊದಲು ದ್ರಾವಿಡರು ಇಲ್ಲಿದ್ದರು ಎನ್ನಬಹುದು. ನಂತರ ಇರಾನಿಯನ್ನರು, ಗ್ರೀಕರು, ಬ್ಯಾಕ್ಟ್ರಿಯನ್ನರು, ಸಿಥಿಯನ್ನರು, ಪಾರ್ಥಿಯನ್ನರು, ಕುಶಾನರು, ಹೂಣರು, ಟರ್ಕರು, ಅರಬ್ಬರು, ಅಫ್‌ಘನ್ನರು, ಪೋರ್ಚುಗೀಸರು, ಡಚ್ಚರು, ಫ್ರೆಂಚರು ಹಾಗೂ ಬ್ರಿಟಿಷರು ಒಬ್ಬರಾದ ಮೇಲೊಬ್ಬರಂತೆ ನಮ್ಮನ್ನು ಆಳಿದರು.

ನಮ್ಮ ರಾಷ್ಟ್ರೀಯ ಬದುಕಿನ ಮುಖ್ಯ ಪ್ರವಾಹದಲ್ಲಿ ಒಂದಾದ ಕೆಲವರು ಇಲ್ಲೇ ನೆಲೆಸಿದರು. ಮಿಕ್ಕವರು ಅಗಾಧ ಪ್ರಮಾಣದ ಬೆಳ್ಳಿ, ಚಿನ್ನ ಮತ್ತು ಅಮೂಲ್ಯ ವಜ್ರಗಳನ್ನು ಮುಖ್ಯವಾಗಿ ಇಲ್ಲಿನ ದೇವಸ್ಥಾನಗಳನ್ನು ಲೂಟಿ ಮಾಡಿ ಹೇರಿಕೊಂಡು ನಿರ್ಗಮಿಸಿದರು.

ಯುದ್ಧ, ರಕ್ತಪಾತ, ಸಾವು ಮತ್ತು ವಿಧ್ವಂಸಕತೆಗಳ ಯಾವ ಸಂದರ್ಭದಲ್ಲಾಗಲೀ ನಮ್ಮ ದೇವತೆಗಳು ನಮ್ಮ ರಕ್ಷಣೆಗೆ ಬರಲಿಲ್ಲ. ಹಾಗೆ ನೋಡಿದರೆ ಅವರು ತಮ್ಮನ್ನು ತಾವೇ ರಕ್ಷಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಈ ಇತಿಹಾಸದಿಂದ ನಾವೇನನ್ನಾದರೂ ಕಲಿತಿದ್ದೇವೆಯೇ? ದೇವರು ಮತ್ತು ಧರ್ಮವನ್ನು ಕುರಿತಂತೆ ನಿರುಪಯುಕ್ತವಾದ ನಂಬಿಕೆಗಳನ್ನಿಟ್ಟುಕೊಂಡು ನಾವು ಒದ್ದಾಡುತ್ತಿದ್ದರೆ ಜಗತ್ತಿನ ಇತರ ದೇಶಗಳು ಅದರಲ್ಲೂ ಪಶ್ಚಿಮ ಜಗತ್ತು ಅಗಾಧ ಪ್ರಗತಿಯನ್ನು ಸಾಧಿಸುತ್ತಿರುವ ಸಂಗತಿಯನ್ನು ನಾವು ಗಮನಿಸಿದ್ದೇವೆಯೇ? ಅದು ಗೋಳವನ್ನು ಸುತ್ತುವರೆದು ಉತ್ತರ ಮತ್ತು ದಕ್ಷಿಣ ಧ್ರುವಗಳನ್ನು ತಲುಪಿ, ಹೊಸ ಖಂಡಗಳನ್ನು ಶೋಧಿಸಿ ಅಪರಿಮಿತ ಆಕಾಶವನ್ನು ಭೇದಿಸಿ, ಹಲವಾರು ನಕ್ಷತ್ರ ಲೋಕಗಳನ್ನು ಗುರುತಿಸಿ, ಚಂದ್ರಯಾನ ಮುಗಿಸಿ, ಮಂಗಳ ಮತ್ತು ಶುಕ್ರ ಗ್ರಹಗಳ ಮೇಲೆ ಪಾದಾರ್ಪಣೆ ಮಾಡುವ ಪ್ರಯತ್ನದಲ್ಲಿದೆ.

ವಿಸ್ತಾರಗೊಳ್ಳುವ ವ್ಯಾಪಕ ವಿಶ್ವದಲ್ಲಿ ಇರಬಹುದಾದ ಇತರ ಬೌದ್ಧಿಕ ಜೀವಿಗಳೊಂದಿಗೆ ಸಂಪರ್ಕವನ್ನು ಬೆಳೆಸಲು ಯೋಚಿಸುತ್ತಿದೆ. ಅಣುವಿಘಟನೆಯಿಂದ ಅಣುಲೋಕದ ರಹಸ್ಯವನ್ನು ಭೇದಿಸುತ್ತಿದೆ.

ಇದಕ್ಕೆ ವಿರುದ್ಧವಾಗಿ ನಾವೇನು ಮಾಡುತ್ತಿದ್ದೇವೆ? ಖಗೋಳ ಶಾಸ್ತ್ರಕ್ಕೆ ಬದಲಾಗಿ ಜ್ಯೋತಿಶಾಸ್ತ್ರಕ್ಕೆ, ಅಂತರ್‌ಗ್ರಹ ಯಾನಕ್ಕೆ ಬದಲಾಗಿ ಹಸ್ತಸಾಮುದ್ರಿಕೆಗೆ, ಖಗೋಳ ಭೌತವಿಜ್ಞಾನಕ್ಕೆ ಬದಲಾಗಿ ಕರಡಿಗುರುಗಳು, ವಂಚಕ ಬಾಬಾಗಳು, ಶೂನ್ಯದಿಂದ ಸೃಷ್ಟಿಸಿದ್ದು ಎನ್ನಲಾದ ಬೂದಿಗೆ ಈಗಲೂ ಪ್ರಾಮುಖ್ಯತೆ ಕೊಡುತ್ತಿದ್ದೇವೆ.

ಇಷ್ಟನ್ನೆಲ್ಲಾ ಕೇಳಿ ನಮ್ಮ ನಿಗೂಢ ಸಾಹಿತ್ಯವನ್ನೂ ಆಧ್ಯಾತ್ಮಿಕ ಸತ್ಯಗಳನ್ನೂ ಅರಿತು ಕೊಳ್ಳಲು ಭಾರತಕ್ಕೆ ನುಗ್ಗುತ್ತಿರುವ ವಿದೇಶಿಯರನ್ನು ತೋರಿಸಿ ನನ್ನನ್ನು ಪ್ರಶ್ನಿಸಬಹುದು. ಸುಮಾರು ಎರಡು ಶತಮಾನಗಳ ಬಿಳಿಯರ ಆಳ್ವಿಕೆಯ ನಂತರವೂ ನಮ್ಮಲ್ಲಿ ಹುದುಗಿಕೊಂಡಿರುವ ಅನಿಷ್ಟಕಾರಿ ಕೀಳರಿಮೆಯಿಂದ ಬಳಲುವುದು ತಪ್ಪಿಲ್ಲ.

ಇಂತಹ ಅವಿವೇಕವೇ ಅಗಲಿ ಬಿಳಿಯರು ಹೊಗಳಿದ ತಕ್ಷಣ ನಮಗೆ ಅನುಕೂಲ ಎನಿಸಿಬಿಡುತ್ತದೆ. ಮುಕ್ತಚಿಂತನ ನಮ್ಮೊಬ್ಬರ ಸೊತ್ತೇ ಅಲ್ಲ. ಪಾಶ್ಚಾತ್ಯ ಜಗತ್ತಿನಲ್ಲೂ ಲಕ್ಷಾಂತರ ಮೂರ್ಖರಿದ್ದಾರೆ. ಯಾವುದೇ ದೇಶದಲ್ಲಿ ಯಾವುದೇ ಕಾಲದಲ್ಲಿ ದ್ರಷ್ಟಾರರು ಜ್ಞಾನಿಗಳು ಇರುವುದು ವಿರಳ.

ಕಾವಿಬಟ್ಟೆಯನ್ನು ಧರಿಸಿ ಭಜನೆ ಮಾಡುತ್ತಾ "ಹರೇರಾಮ! ಹರೇಕೃಷ್ಣ!" ಎಂದು ಹಾಡುತ್ತಾ ನಮ್ಮ ಬೀದಿಗಳಲ್ಲಿ ಉನ್ಮತ್ತರಾಗಿ ಕುಣಿಯುವ ಅಥವಾ ಯೋಗಶಿಕ್ಷಣಕ್ಕಾಗಿ, ಅಫೀಮಿನಂತಹ ಮಾದಕ ವಸ್ತುಗಳ ಅನುಭವಕ್ಕಾಗಿ ಯೋಗಾಶ್ರಮಗಳನ್ನು ಸೇರುವವರು ಪಾಶ್ಚಾತ್ಯ ಸಮಾಜದ ತಿರಸ್ಕೃತರು ಎಂದು ನಾನು ಧೈರ್ಯವಾಗಿ ಹೇಳಬಲ್ಲೆ.

ಜಗತ್ತಿನ ಇತಿಹಾಸ ಮತ್ತು ಸಂಸ್ಕೃತಿಯ ವಸ್ತುನಿಷ್ಠ ಅಭ್ಯಾಸವು ಧರ್ಮದ ಬಗ್ಗೆ ನನ್ನನ್ನು ಹೆಚ್ಚು ವಿಮುಖಿಗೊಳಿಸಿದೆ. ಧರ್ಮದ ಹೆಸರಿನಲ್ಲಿ ನಡೆಯದೇ ಇರುವ ವಂಚನೆಯಿಲ್ಲ. ಕ್ರೌರ್ಯವಿಲ್ಲ. ಅಪರಾಧವಿಲ್ಲ. ಆದ್ದರಿಂದ ಧರ್ಮದ ಬಗ್ಗೆ ನಾನು ಮಾತನಾಡುವಾಗೆಲ್ಲ ಭಾವಾವೇಶಕ್ಕೊಳಗಾಗಿ ಬಿಡುತ್ತೇನೆ. ಧರ್ಮವನ್ನು ನಿರಾಕರಿಸಿ ವಿಚಾರವಾದದ ಹಾದಿಯನ್ನು ತುಳಿಯಲೇ ಬೇಕಾದ ಕಾಲವು ಬಂದಿದೆ ಎನ್ನುವ ಮಾತನ್ನು ಹೇಳದೆ ಇರಲು ನನ್ನಿಂದ ಸಾಧ್ಯವಿಲ್ಲ.

ಆಧುನಿಕ ಕಾಲ - 10

ವೈಚಾರಿಕತೆಯ ಹಾದಿಯನ್ನು ತುಳಿಯಬೇಕಾದರೆ ನಾವು ಮಾಡಬೇಕಾದ ಮೊದಲನೆ ಕೆಲಸವೆಂದರೆ ಆತ್ಮದ ಕಲ್ಪನೆಯನ್ನು ನಿರಾಕರಿಸುವುದು. ಇದು ಅಸಂಬದ್ಧವಾಗಿ ತೋರಬಹುದು. ಆದರೆ ಬುದ್ಧನಷ್ಟೇ ಅಲ್ಲದೆ ಲೋಕಾಯತರು ಸಾಂಖ್ಯದ ಪ್ರಾರಂಭದ ಚಿಂತಕರು ಆತ್ಮವನ್ನು ನಿರಾಕರಿಸಿದರು ಎನ್ನುವುದನ್ನು ನಾವು ಮರೆಯಬಾರದು. ಆತ್ಮದ ಕಲ್ಪನೆಯ ನಿರಾಕರಣೆ ನಮ್ಮ ಪರಂಪರೆಗೆ ಹೊಸದೇನಲ್ಲ. ಬರ್ಟ್ರಂಡ್ ರಸೆಲ್ ಹೇಳುವಂತೆ "ವೈಜ್ಞಾನಿಕವಾಗಿ ಕೆಲಸಕ್ಕೆ ಬಾರದ್ದು ಎಂದು ರುಜುವಾತಾಗಿರುವ' ಭವ್ಯ' ಪರಿಕಲ್ಪನೆಗಳಲ್ಲಿ ಆತ್ಮದ ಕಲ್ಪನೆಯೂ ಒಂದು. ಆತ್ಮವಿಲ್ಲ ಎಂದು ರುಜುವಾತು ಪಡಿಸುವ ಆಧಾರವಿದೆ ಎನ್ನುವುದು ನನ್ನ ಅರ್ಥವಲ್ಲ. ಹಾಗೇನಾದರೂ ಆತ್ಮಯೆಂಬುದೊಂದಿದ್ದರೆ ಕಾರ್ಯಕಾರಣ ನಿಯಮವನ್ನು ಅನುಸರಿಸುವಲ್ಲಿ ಅದು ಯಾವ ಪಾತ್ರವನ್ನೂ ವಹಿ[illegible]ದಿಲ್ಲ ಎನ್ನುವುದು ಇದರರ್ಥ ...20

ಯಾವುದೇ ಕಾರ್ಯಕಾರಣ ನಿಯಮವನ್ನು [illegible] ಪಟ್ಟಲು ಆತ್ಮದ ಕಲ್ಪನೆಯು ನಿರುಪಯುಕ್ತ ಎ[illegible] ದಾದರೆ ನಾವೇಕೆ ಅದಕ್ಕೆ ಜೋತು ಬೀಳಬೇಕ[illegible] ಉಪನಿಷತ್ತುಗಳನ್ನು ಓದದೆ ಅವುಗಳನ್ನು [illegible] ಮಾಡುವವರಿಗೆ ಆತ್ಮಕ್ಕೆ ಸಂಬಂಧಿಸಿದಂತೆ ಯಾ[illegible] ಎರಡು ಉಪನಿಷತ್ತುಗಳಲ್ಲಿ ಒಮ್ಮತವಿಲ್ಲ [illegible]ದನ್ನು ತಿಳಿದರೆ ಆಶ್ಚರ್ಯವಾಗಬಹುದು. [illegible] ಎಂದು ನಾವು ಕರೆಯುವುದರ ಪ್ರಜ್ಞೆ ಮತ್ತು [illegible] ಪ್ರಜ್ಞೆಯ ಪದರಗಳ ಮತ್ತು ಕರುಪದರ[illegible] ಸಂಕೀರ್ಣ ರಚನೆಯನ್ನು ನಿರ್ವಹಿಸುವುದು ಸಾಧ್[illegible]ವಿಲ್ಲ. ಆದರೂ ಪ್ರಾಣಿಗಳಿಂದ ನಮ್ಮನ್ನು ಭಿನ್ನವಾ[illegible]ರುವ ನಮ್ಮ ಸಂಸ್ಕೃತಿ ಮತ್ತು ತತ್ವಜ್ಞಾನದ ಮ[illegible]ವೆಂದರೆ ಬುದ್ಧಿಯೇ. ಇದನ್ನು ಅಲ್ಲಗಳೆಯುವ[illegible] ಸಾಧ್ಯವಿಲ್ಲ. ಲಕ್ಷಾಂತರ ವರ್ಷಗಳವರೆಗೆ ಮನುಷ್ಯ[illegible] ಕೂಡ ಮಿಕ್ಕ ಪ್ರಾಣಿಗಳಂತೆಯೇ ಇದ್ದುದು ನಮಗೆ ಗೊತ್ತಿರುವ ವಿಷಯ. ದೈಹಿಕವಾಗಿ ಇತರ ಪ್ರಾಣಿ[illegible]ಗಿಂತ ಅವನು ದುರ್ಬಲನಾಗಿದ್ದು ಪ್ರಕೃತಿ[illegible] ಅವನಿಗೆ ಕೊಟ್ಟಿದ್ದ ರಕ್ಷಣಾ ತಂತ್ರವು ಅಷ್ಟೇನ[illegible] ಉತ್ತಮವಾದ್ದಾಗಿರಲಿಲ್ಲ. ಆದರೂ ಆಯುಧಗಳ[illegible] ಕಂಡು ಹಿಡಿದ ಮೇಲೆ ಅವನು ಪ್ರಕೃತಿಯ ಒಡ್ಡಿ[illegible]ತ್ತೊಂದರೆಗಳನ್ನು ನಿವಾರಿಸಿಕೊಂಡು ತನ್ನ ಜಗತ್ತಿ[illegible] ಪ್ರಬಲನಾಗತೊಡಗಿದ. ಆ ಆಯುಧಗಳು ಕಟ್ಟಿ[illegible] ಕಲ್ಲು, ಮೂಳೆ ಕೊಂಬುಗಳಂಥಾ ವಸ್ತುಗಳಿಂದ ಮಾಡಿ[illegible]ದಾಗಿದ್ದವು. ಇವುಗಳನ್ನು ಉಪಯೋಗಿಸತೊ[illegible]ದಂದೇ ಅವನು ಪ್ರಾಣಿ ಸ್ಥಿತಿಯಿಂದ ಮೇಲೆದ್ದು [illegible] ಕುಶಲ ಕರ್ಮಿ ಮಾನವನ ಸ್ಥಿತಿಗೇರಿ[illegible] ನಂತರ ಇನ್ನೂ ಒಂದು ಹೆ[illegible] ಮುಂದುವರಿದು ಮಾತು ಮತ್ತು ಭಾಷೆಯನ[illegible] ಕಲಿತು ಯೋಚಿಸಬಲ್ಲ ಸಾಮಾಜಿಕ ಮನುಷ್ಯನಾ[illegible] ಆದ್ದರಿಂದ ಯೋಚಿಸುವುದನ್ನು ನಿರಾಕರಿಸುವುದೆಂ[illegible] ನಮ್ಮ ಬುದ್ಧಿ ನಮಗೆ ಕೊಟ್ಟಿರುವ ಅನನ್ಯತೆಯನ[illegible] ನಿರಾಕರಿಸುವುದಾಗಿದೆ.

ಬುದ್ಧಿ ಅಷ್ಟೇನೂ ಪ್ರಬಲ ಉಪಕರಣವಲ್ಲ ಎಂಬ[illegible]ದನ್ನು ನಾನು ಮರೆತಿಲ್ಲ. ಆದರೆ ಅದು ಒಂದು, ಐದ[illegible] ಅಥವಾ ಹತ್ತು ಸಾವಿರ ವರ್ಷಗಳ ಹಿಂದೆ ಇದ[illegible]ಕ್ಕಿಂತಲೂ ಈಗ ಹೆಚ್ಚು ಶಕ್ತಿಯುತವಾಗಿದೆ. ಕಳೆ[illegible] ನಾಲ್ಕೈದು ಶತಮಾನಗಳಲ್ಲಿ ಅದು ಹಿಂದೆಂದ[illegible] ಕಾಣಿರದ ಶಕ್ತಿಯನ್ನು ಸಂಚಯಿಸಿಕೊಂಡಿದೆ. ಈ ಶ[illegible]ಮಾನಗಳ ಕಾಲಾವಧಿಯಲ್ಲಿ ವಿಜ್ಞಾನವು ಅತ್ಯಂ[illegible] ವೇಗವಾಗಿ ಮುಂದುವರೆದು ಪಾಶ್ಚಾತ್ಯ ಮನುಷ್ಯ[illegible] ಜೀವನ ವಿಧಾನವನ್ನೇ ಮಾರ್ಪಡಿಸಿದೆ. ಹಾಬ್[illegible] (Hobbes)ನ ಮಾತುಗಳಲ್ಲಿ ಹೇಳುವುದಾದ[illegible] "ವಿಜ್ಞಾನ ಮತ್ತು ತಾಂತ್ರಿಕತೆಯ ಸರ್ವಾಂಗೀಣಬೆಳವ[illegible]ಗೆಯ ಮುಂಚೆ ಮನುಷ್ಯನ ಬದುಕು "ಅಸಹ್ಯವೂ[illegible] ಕ್ರೂರವೂಅಲ್ಪಕಾಲದ್ದೂ" ಆಗಿತ್ತು. ಇವೆಲ್ಲವುಗಳಿಂ[illegible] ನಾವು ಹೊರಬಂದಿರುವುದು ನಿಜವಾದರೆ ಯ[illegible] ವಲ್ಕ್ಯ ಮತ್ತು ಉದ್ದಾಲಕ, ಪ್ಲೇಟೊ ಮತ್ತು ಅ[illegible] ಸ್ಟಾಟಲ್, ಕನ್‌ಫ್ಯೂಶಿಯಸ್ ಮತ್ತು ಲಾವೋತ್[illegible] ಇವರುಗಳ ಕನಸಿನ ಪ್ರಪಂಚವನ್ನು ಮೀರಿ ನಮ[illegible] ಜ್ಞಾನದಿಗಂತವನ್ನು ವಿಸ್ತರಿಸಿರುವ ನಮ್ಮ ಬುದ್ಧಿಯೆ[illegible] ಕಾರಣ.

ದ್ದರಿಂದ ಯೋಗದ ಆಕರ್ಷಣೆಯಿಂದ ನಮ್ಮ
ದ್ಧಿಯನ್ನು ತುಳಿದು ಹಾಕುವುದು ಬೇಡ.
ಮ್ಮಾದ ಕೊಂಬುಳ್ಳ ಮಹಾಯೋಗಿಯಿಂದ ಹಿಡಿದು
ಹ ಸುಮಾರು ಜನರನ್ನು ನಾವು ನೋಡಿದ್ದಾಗಿದೆ.
ಹಾವೀರ, ಬುದ್ಧರನ್ನೂ ಕೂಡ ಅರ್ಧ ತೆರೆದ
ಗಳುಳ್ಳ ಅಂತರ್ಮುಖಿಗಳಂತೆ ಚಿತ್ರಿಸಲಾಗಿದೆ.
ು ಬದಲಾವಣೆಗಾಗಿಯಾದರೂ ನಮ್ಮ ಹೊರ
ನ್ನು ನೋಡಲು ನಮ್ಮ ಕಣ್ಣುಗಳನ್ನು ಅಗಲ
ತೆರೆದಿಡೋಣ. ಈ ಜಗತ್ತಿನ ಆಚೆಗಿರುವ
ನ್ನು ಅರಿತುಕೊಳ್ಳಲು ಇದು ಅವಶ್ಯಕ.

ಮ್ಮ ಬುದ್ಧಿಯನ್ನು, ಅದರ ಶಕ್ತಿಯನ್ನು ತೆಗಳು
ಗೆ ನನ್ನ ಉತ್ತರ ಇದು: "ಮನುಷ್ಯನ ಜನ್ಮಸಿದ್ಧ
ಎಂದು ಇದಕ್ಕಿಂತ ಬೇರೆ ಯಾವುದನ್ನು ಕರೆ
ು ಸಾಧ್ಯ?" ಆಧುನಿಕ ಮನಃಶಾಸ್ತ್ರವು ಬೆಳಕಿಗೆ
ಮೇಲೆ ಬುದ್ಧಿಯ ವೈಚಾರಿಕ ಗುಣ ಸಂದೇಹ
ಕಗಾಗಿದೆ ಮತ್ತು ಸ್ಥಾನ ಕಳೆದುಕೊಳ್ಳುತ್ತಿದೆ
ಂದು ನನಗೆ ಗೊತ್ತು. ಕೆಲವು ವರ್ಷಗಳ ಹಿಂದೆ
ಲ್ಲದ Institute for Advanced
diesನ ಸಂಕಿರಣವೊಂದರಲ್ಲಿ ನಾನು "ತೆಲುಗು
ತ್ಯದಲ್ಲಿ ಧರ್ಮ ನಿರಪೇಕ್ಷತೆ" ಎನ್ನುವ ಪ್ರಬಂಧ
ದನ್ನು ಓದಿದೆ. ಆಗ ಬಂದ ಒಂದು ಪ್ರಶ್ನೆ
... "ಮಾನವನು ಬೌದ್ಧಿಕವಾಗಿ ವೈಚಾರಿಕತೆ
ಗಳಲ್ಲಿ ಮೆರವ... ಕಲೆ ... ಎಂದು
ತಿಳಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಇಬ್ಬರು
ಗಳು ಮಾತ್ರ ಬಂದಿದ್ದರು.

ಎರಡು ಉಪನ್ಯಾಸಗಳು

ಭಾರತದ ಬೌದ್ಧಿಕ ದಾರಿದ್ರ್ಯ

ಮೂಲ: ವಿ. ಆರ್. ನಾರ್ಲ
ಅನು: ಗಂಗಾಧರಮೂರ್ತಿ

ಬುದ್ಧಿಗೆ ವೈಚಾರಿಕ ಗುಣ ಇದೆ ಎಂದು ಹೇಗೆ ಹೇಳುವಿರಿ?"

ಇದಕ್ಕೆ ನನ್ನ ಉತ್ತರ ಹೀಗಿತ್ತು: "ನಮ್ಮ ಬುದ್ಧಿಯು ವೈಚಾರಿಕತೆಯನ್ನು ಸರಿಯಾಗಿ ರೂಢಿಸಿಕೊಂಡಿದ್ದರೆ, ಯಶಸ್ವಿಯಾಗಿ ಪೋಷಿಸಿದ್ದರೆ ಎರಡು ಜಾಗತಿಕ ಯುದ್ಧವನ್ನು ನಿವಾರಿಸಬೇಕಾದರೆ ಮುಸೊಲಿನಿ, ಹಿಟ್ಲರ್ ಅಥವಾ ಫ್ರಾಂಕೋರಂತಹ ವಿಚಾರಹೀನರು ಅಧಿಕಾರಕ್ಕೆ ಬರದಂತೆ ನೋಡಿಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ. "ಅಮೆರಿಕಾ ಕ್ರಾಂತಿಯ ತತ್ವಜ್ಞಾನಿ ಟಾಂಪೇನ್ ವಿಚಾರವಾದಿಯಾಗಿದ್ದ. ಅಮೆರಿಕನ್ ಕ್ರಾಂತಿಯು ಮಾನವನಿಗೆ ವರಪ್ರಧಾನವಾಗಿದೆ ಎನ್ನದೆ ಶಾಪವಾಗಿದೆ ಎನ್ನಲು ಸಾಧ್ಯವೇ? ಫ್ರೆಂಚ್ ಕ್ರಾಂತಿಯ ಅಧ್ವರ್ಯುಗಳಾದ ವಾಲ್ಟೇರ್, ಡಿಡೆರೋ, ಅಲೆನ್‌ಬೋ ಮುಂತಾದವರು ವಿಚಾರವಾದಿಗಳೇ ಆಗಿದ್ದರು. ಈ ಕ್ರಾಂತಿಯು ಹಿಂಸೆಗೆಡೆ ಮಾಡಿದರೂ ಇದರಿಂದ ಮಾನವ ಕುಲಕ್ಕೆ ಯಾವ ಪ್ರಯೋಜನವೂ ಆಗಲಿಲ್ಲ ಎನ್ನಲು ಸಾಧ್ಯವೇ?

ಕೊನೆಯದಾಗಿ ನಿಮ್ಮಲ್ಲಿ ಒಂದು ನಿವೇದನೆ. ಲೋಕಾಯತ ಮತ್ತು ಚಾರ್ವಾಕ ದರ್ಶನಗಳು ಋಗ್ವೇದ ಕಾಲಕ್ಕಿಂತ ಮುಂಚೆ ಇದ್ದವು. ಅವೆರಡೂ ... ಸಮಕಾಲೀನ ಜಗತ್ತಿನಲ್ಲಿ ಅನನ್ಯವಾಗಿದ್ದು ಹಾಕುತ್ತಿದ್ದ ಪ್ರಶ್ನಿಸುವ ಚೈತನ್ಯವನ್ನು ಎತ್ತಿಹಿಡಿ ಎಣೆಯಿಲ್ಲ. ಈತ ಕು...ದಕ್ಕೆ ಋಗ್ವೇದದಲ್ಲೂ ಆಧಾರ

ಅವರ ಕುಟುಂಬ ತಾಯಪ್ಪನ...ನ ಸಂದರ್ಭದಲ್ಲಿ ತನ್ನ ದಿಕ್ಕುಗೆಟ್ಟಿದೆ.

... ಒಂದು ಉಕ್ಕು ... (ಸ್ವರ್ಗ-

...ಸ್ವಾಮಿ ಆನಂದ ತೀರ್ಥ....

(11ನೇ ಪುಟದಿಂದ)

...' ಕಡೆಗೆ ಒಲಿದಿದ್ದ ಆನಂದ ತೀರ್ಥರು ಅದರ
...ಲಕ ನಾನು ಹರಿಜನ ಸೇವೆಯನ್ನು ಮತ್ತಷ್ಟು
...ಗೊಳಿಸಬಹುದೆಂದು ನಂಬಿ ಅದರ ಸದಸ್ಯ
...ರು. ಶ್ರೀ ನಾರಾಯಣ ಗುರು ಹೇಳಿದಂತೆ
...ರಿಗೂ ಹೆದರಬೇಡ' ಮಾಡಬೇಕಾದ್ದು ಬಹು
ಇದೆ ಎಂಬುದನ್ನು ತಮ್ಮ ಜೀವನ ಮಂತ್ರವ
ಮಾಡಿಕೊಂಡ ಆನಂದ ತೀರ್ಥರು ಅವರ
...ರಾಯಣ ಧರ್ಮ ಪರಿಪಾಲನಾ ಸಂಘ'(SNDP)
...ಮುಖ ಕಾರ್ಯಕರ್ತರಾದರು. ಆದರೆ ಅಲ್ಲಿ
ಇವರ ತೀವ್ರ ಕಾರ್ಯಕ್ರಮಗಳಿಗೆ ಒಪ್ಪದ
...ಜಾತಿ ಜನಸೇವಕರಿಂದ ಭಿನ್ನವಾಗಿ ರಾಜೀನಾಮೆ
...ರು.

...ಮಿ ಆನಂದ ತೀರ್ಥರು ಹರಿಜನ ಸೇವಕ ಸಂಘ
... ಮುನ್ನೂರು ಸಕ್ರಿಯ ಕಾರ್ಯಕರ್ತರಲ್ಲಿ
...ರು. ಆದರೆ ಇವರು ಎಲ್ಲರಿಗಿಂತಲೂ ಭಿನ್ನವಾದ
...ರು ಹೋರಾಟಗಳನ್ನು ನಡೆಸುತ್ತಿದ್ದರು. ಇವರ
...ರಾಟಗಳು ಅನಿವಾರ್ಯವಾಗಿ ಸಂಘರ್ಷವನ್ನುಂಟು
...ಸುತ್ತಿದ್ದವು. ಇದರಿಂದ ಇರಿಸು ಮುರುಸು
...ತ ಹರಿಜನ ಸೇವಕ ಸಂಘದ ಕೇಂದ್ರ ಸಮಿತಿಯ

...ರು ಬಡಿಗೆಗಳನ್ನು ಹಿಡಿದಿದ್ದರು. ರಜ್ಜಪ್ಪ, ...ಲ್ಲಾರಿ ನರಸಣ್ಣ, ಪೆದ್ದಣ್ಣ ಇವರು ತಾಯಪ್ಪನಿಗೆ ಬಲವಾಗಿ ಬೆತ್ತಗಳಿಂದ ಹೊಡೆದರು. ಕೆಲವು ಕಾರ್ಯಕರ್ತರು ಅಲ್ಲಿಗೆ ಧಾವಿಸುವುದರಲ್ಲಿ ತಾಯಪ್ಪ ಸ್ಥಳ

ಸದಸ್ಯರು ನೀವು ಗಾಂಧೀಜಿಯವರ ಆದರ್ಶಗಳಿಗೆ ವಿರುದ್ಧವಾದ ಕೆಲಸಗಳನ್ನು ಮಾಡುತ್ತಿದ್ದೀರಿ ಎಂದು ದೂರಿದರು. ಮೇಲ್ಜಾತಿಯವರ ಮನವೊಲಿಸಿ, ಹರಿಜನರನ್ನು ನಿಜವಾದ ಹಿಂದುಗಳನ್ನು ಮಾಡಿ ದೇವಸ್ಥಾನಗಳನ್ನು ಪ್ರವೇಶದಂಥ ಕೆಲಸಗಳನ್ನು ಮಾಡಬೇಕು. ಅಲ್ಲದೆ ಯಾರಿಗೆ ದೇವರಲ್ಲಿ ನಂಬಿಕೆ ಇಲ್ಲವೋ ಅಂಥವರನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಬಾರದು ಎಂದು ಹೇಳಿದರು. ಅದಕ್ಕೆ ಆನಂದ ತೀರ್ಥರು ದೇವರನ್ನು ನಂಬದ ಕಮ್ಯುನಿಸ್ಟರು ಕೂಡ ಹರಿಜನರನ್ನು ದೇವಸ್ಥಾನಗಳಿಗೆ ಕರೆದುಕೊಂಡು ಹೋಗಬೇಕು. ಯಾಕೆಂದರೆ ಅದು ಅವರ ಸಾಮಾಜಿಕ ಸ್ಥಾನಮಾನದ ಪ್ರಶ್ನೆಯೆಂಬುದನ್ನು ತಿಳಿಯಬೇಕು. ಈ ರೀತಿಯ ಕೆಲಸಗಳಲ್ಲಿ ಘರ್ಷ... ...ವಾರ್ಯ. ಮೇಲ್ಜಾತಿಯವರು ತಮ್ಮ ಮನಸ್ಸುಗಳನ್ನು ಬದಲಾಯಿಸಿಕೊಂಡು ಹರಿಜನರನ್ನು ಒಳಗೆ ಬಿಡುವುದಿಲ್ಲ ಎಂದು ಹೇಳಿದರು ಅಲ್ಲದೆ ಹಿಂದೂ ಸಮಾಜದಲ್ಲಿ ಶ್ರೇಣೀಕೃತ ವ್ಯವಸ್ಥೆ ಇಲ್ಲ. ಒಬ್ಬ ಇನ್ನೊಬ್ಬನಿಗಿಂತ ಎಷ್ಟು ಮೇಲಿದ್ದಾನೆ ಎಂದೇ ಯೋಚಿಸುತ್ತಾನೆ. ಆದ್ದರಿಂದ ಮನಃಪರಿಕಲ್ಪನೆ "ಸುಳ್ಳು ಪರಿಕಲ್ಪನೆ" ಎಂದರು. ಆದ್ದರಿಂದ 'ಹರಿಜನ ಸೇವಕಸಂಘ' ಹಿಂದುಗಳ ವಿರುದ್ಧ ಬಂಡೇಳಬಹುದಾದ ಹರಿಜನರನ್ನು ತಡೆಯುವ ಸಾಧನವಾಗಿ ಕೆಲಸ ಮಾಡುತ್ತಿತ್ತು' ಎಂದು ಪ್ರತಿಪಾದಿಸಿದರು.

ಕೊನೆಯದಾಗಿ ಈ ಪುಸ್ತಕ ಅಸ್ಪೃಶ್ಯತೆ ವಿರುದ್ಧದ ಹೋರಾಟ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳಿಗೆ ಸಂಬಂಧಿಸಿದೆ ಎಂದು ಪರೋಕ್ಷವಾಗಿ ತಿಳಿಸುತ್ತದೆ. ಅಂತೆಯೇ ಈ ಸಮಸ್ಯೆಯ ಪರಿಹಾರಕ್ಕೆ ಸರ್ಕಾರದ ಪ್ರಾಮಾಣಿಕ ಪ್ರಯತ್ನ ಮತ್ತು ನ್ಯಾಯಾಲಯ ದಲಿತರ ಪಕ್ಷಪಾತಿಯಾಗಿ ಕೆಲಸ ಮಾಡಬೇಕಾಗಿದೆ ಎಂಬುದನ್ನು ಹೇಳುತ್ತದೆ. ಇದು ಇವತ್ತಿನ ದಲಿತ ಚಳುವಳಿಯ ದಿಕ್ಕನ್ನು ನಿರ್ಧರಿಸುವಲ್ಲಿ ಸಹಾಯಕವಾಗುವಂಥ ಮಾರ್ಗದರ್ಶಕ ಪುಸ್ತಕ ಎಂದರೆ ತಪ್ಪಾಗಲಾರದು. ಇಂಥ ಮಾನವೀಯ ಹೋರಾಟಗಾರರಾದ ಆನಂದ ತೀರ್ಥರ ಜೀವನವನ್ನು ಅತ್ಯಂತ ಸಮರ್ಪಕವಾಗಿ ಚಿತ್ರಿಸಿದ ಶ್ರೀ ಅಬ್ರಹಾಂ ಆಯಿರು ಕುಯಿಲ್ ಅಭಿನಂದನಾರ್ಹರು.

ಎಲ್. ಹನುಮಂತಯ್ಯ

R.N. 29681/76 PANCHAMA Fortnightly 1-15 FEBRUARY, 88 Reg. No. B.G.W.

ಜಯಹೇ ಕರ್ನಾಟಕ ಮಾತೆ
ಜಯ ಭಾರತ ಜನನಿಯ ತನುಜಾತೆ

(ಕುವೆಂಪು)

ಕರ್ನಾಟಕ ಎರಡು ಸಹಸ್ರ ವರ್ಷಗಳ ಭವ್ಯ ಇತಿಹಾಸವುಳ್ಳ ಪುಣ್ಯಭೂಮಿ. ಉಜ್ವಲ ಪರಂಪರೆಯನ್ನು ಅಚ್ಚಳಿಯದಂತೆ ಕಾಪಾಡಿಕೊಂಡು ಬಂದಿರುವ ಪವಿತ್ರ ಭೂಮಿ ವಿವಿಧ ಮತಧರ್ಮಗಳ ಮಹಾಸಂಗಮ, ಉದಾತ್ತ ದಾರ್ಶನಿಕರ ತಾಣ, ಮಹಾನ್ ಸಾಹಿತಿಗಳ ನೆಲೆವೀಡು. ಕಲಾ ಸಂಸ್ಕೃತಿಯ ವಿಸ್ತಾರವೇದಿಕೆ, ಪೋಷಕರೂ ಸ್ವಯಂ ವಿದ್ವಾಂಸರೂ ಆಗಿದ್ದ ರಾಜಮಹಾರಾಜರುಗಳ ತೇಜೋರಂಗ, ಲೋಕ ಕಲ್ಯಾಣಕ್ಕಾಗಿ ಅವಿರತವಾಗಿ ದುಡಿದ ಸಮಾಜ ಸುಧಾರಕರ ಕಾರ್ಯಕ್ಷೇತ್ರ.

ಕನ್ನಡ ನುಡಿಯು ವೀಣೆಯ ಮಿಡಿತ, ಕನ್ನಡ ಕಾವ್ಯವು ಕೋಗಿಲೆಯ ಕೂಜಿತ, ಕನ್ನಡ ಸಾಹಿತ್ಯದ ಕಂಪು ಹರಡಿರದ ತಾವಿಲ್ಲ; ಕರ್ನಾಟಕದ ಗಾನಕಲೆಯ ಇಂಪು ಪಸರಿಸದ ದಿಕ್ಕಿಲ್ಲ. ವೀಣೆ ಶೇಷಣ್ಣನವರಂತಹ ವೈಣಿಕ ಶಿರೋಮಣಿಗಳು, ಚೌಡಯ್ಯನವರಂತಹ ಅಮೋಘ ಪಿಟೀಲು ವಿದ್ವಾಂಸರು, ವಾಸುದೇವಾಚಾರ್ಯರಂತಹ ಮಹಾನ್ ವಾಗ್ಗೇಯಕಾರರು ಜನಿಸಿದ ನಾಡಿದು. ಭೀಮಸೇನಜೋಶಿ, ಗಂಗೂಬಾಯಿ ಹಾನಗಲ್, ಮಲ್ಲಿಕಾರ್ಜುನ ಮನಸೂರ್ ಮೊದಲಾದ ಉತ್ತುಂಗ ಸಂಗೀತಜ್ಞರು ಕರ್ನಾಟಕದ ಕೀರ್ತಿ ಪತಾಕೆಯನ್ನು ರಾಷ್ಟ್ರಾದ್ಯಂತ ಒಯ್ಯಲು ತಮ್ಮ ಕಲಾ ತಪಸ್ಸನ್ನು ಕೈಗೊಂಡ ಬೀಡಿದು. ಸಾಹಿತ್ಯರಂಗದಲ್ಲಿ ರಾಷ್ಟ್ರದ ಅತ್ಯುನ್ನತ ಗೌರವವಾದ ಜ್ಞಾನಪೀಠ ವಿಜೇತರಾದ ಬೇಂದ್ರೆ, ಡಿ.ವಿ.ಜಿ., ಮಾಸ್ತಿ, ಕುವೆಂಪು, ಕಾರಂತರಂತಹ ಉದಾತ್ತ ಶಿರೋಮಣಿಗಳ ಕಾರ್ಯಾಗಾರವಿದು.

ನಮ್ಮ ನಾಡಿನ ಕಲಾಭಂಡಾರದ ಸಿರಿಯು ಅಳತೆಗೆ ಮೀರಿದ್ದು. ಐಹೊಳೆ, ಪಟ್ಟದಕಲ್ಲು, ಬಾದಾಮಿ, ಬೇಲೂರು, ಹಳೇಬೀಡು, ಸೋಮನಾಥಪುರ, ಹಂಪೆ, ವಿಜಾಪುರ ಮುಂತಾದೆಡೆಗಳಲ್ಲಿನ ಭವ್ಯ ಕಲಾಕೃತಿಗಳು ಕಾವ್ಯವನ್ನೇ ಸ್ಫುರಿಸುತ್ತವೆ. ಕಲೋಪಾಸಕರಿಗೆ, ಪ್ರವಾಸಿಗರಿಗೆ ಅಷ್ಟೇಕೆ ಎಲ್ಲರಿಗೂ ಈ ರಮ್ಯ ಶಿಲ್ಪಾಕೃತಿಗಳು ಒಂದು ಸೋಜಿಗ. ಈ ಅಪೂರ್ವ ಕಲೆಯ ಪರಂಪರೆಯನ್ನು ಪ್ರತಿಫಲಿಸುತ್ತಿರುವ ನಮ್ಮ ಕರಕುಶಲ ಕೈಗಾರಿಕೆ ದೇಶವಿದೇಶಗಳಲ್ಲಿ ನಮ್ಮ ನಾಡಿನ ಕೀರ್ತಿಯನ್ನು ಬೆಳಗಿದೆ. ಈ ದೈವಿಕ ಕಲೆಯನ್ನು ವಂಶಪಾರಂಪರ್ಯವಾಗಿ ಬೆಳೆಸಿಕೊಂಡು ಬರುತ್ತಿರುವ ನಮ್ಮ ಗುಡಿಗಾರರು, ನಿಜವಾಗಿಯೂ ನಮ್ಮ ರಾಷ್ಟ್ರದ ಕಲೆಯ ರಾಯಭಾರಿಗಳು. ಅವರ ಗಂಧದಮರದ ಕಲಾಕೃತಿಗಳು ಜಗದಾದ್ಯಂತ ರಾರಾಜಿಸುತ್ತಿವೆ. ಅವರ ಅಪೂರ್ವ ಕಲಾ[illegible]ತೆಗೆ ಬೆಲೆ ಕಟ್ಟಲು ಯಾರಿಂದ ತಾನೆ ಸಾಧ್ಯ ?

ನಮ್ಮ ಚೆಲುವ ಕನ್ನಡನಾಡು ಗಂಧದಗುಡಿ [illegible]ಗಳು ಕರ್ನಾಟಕದ ಅರಣ್ಯಗಳಲ್ಲಿ ಹೇರಳವಾಗಿವೆ. ಇದರ ಸುಗಂಧ ಸಾಗರದಾಚೆ ಪಸರಿಸಿದೆ. ನಮ್ಮ ನಾಡಿನ ಅಗರಬತ್ತಿ ಕೈಗಾರಿಕೆ [illegible].

ಕರ್ನಾಟಕವು ರೇಷ್ಮೆಯ ತವರು. ರಾಷ್ಟ್ರದ ರೇಷ್ಮೆ ಉತ್ಪನ್ನದಲ್ಲಿ ಬಹುಪಾಲು ಕರ್ನಾಟಕದ ಕೊಡುಗೆ. ನಮ್ಮ ನಿಪುಣ ನೇಕಾರರು ಕೈಮಗ್ಗಗಳಲ್ಲಿ ತಯಾರಿಸುವ ಕಲಾತ್ಮಕ ರೇಷ್ಮೆ ವಸ್ತ್ರಗಳು ಜಗದಾದ್ಯಂತ ಅಪಾರ ಮೆಚ್ಚುಗೆ ಗಳಿಸಿವೆ.

ನಮ್ಮ ಅಭಯಾರಣ್ಯಗಳಲ್ಲಿ ವನ್ಯಮೃಗಗಳು ನಿರ್ಭಯದಿಂದ ಓಡಾಡುತ್ತವೆ. ವನ್ಯಮೃಗ ರಕ್ಷಣೆಯಲ್ಲಿ ಕರ್ನಾಟಕ ಎತ್ತಿದ ಕೈ. ಅಂತೆಯೇ ಪ್ರವಾಸೋದ್ಯಮದಲ್ಲೂ ಹೌದು. ಜಗತ್ತಿನ ನಾನಾ ಮೂಲೆಗಳಿಂದ ಬರುವ ಪ್ರವಾಸಿಗರಿಗೆ ಕರ್ನಾಟಕವು ಭೂಮಿಯ ಮೇಲಣ ಸ್ವರ್ಗ. ವರ್ಷಾದ್ಯಂತ ಹಿತಕರ ವಾತಾವರಣವುಳ್ಳ ನಮ್ಮ ರಾಜ್ಯದ ಅನೇಕ ಪ್ರೇಕ್ಷಣೀಯ ಸ್ಥಳಗಳು ಅವರಿಗೆ ವಿಶೇಷ ಆಕರ್ಷಣೆ. ಕೃಷ್ಣರಾಜಸಾಗರದ ಬೃಂದಾವನ ಉದ್ಯಾನ, ಜೋಗದ ಜಲಪಾತ, ನಂದಿಬೆಟ್ಟ, ಆಗುಂಬೆ, ಬಂಡೀಪುರ, ಮೊದಲಾದವು ಎಲ್ಲರ ಕಣ್ಮನ ತಣಿಸುವ ರಮಣೀಯ ತಾಣಗಳು.

ಕರ್ನಾಟಕದ ನೈಸರ್ಗಿಕ ಸಂಪತ್ತು ಅಪಾರ ಹಾಗೂ ಅಮೂಲ್ಯ. ಅದನ್ನು ರೂಢಿಸಿ ಜನಕಲ್ಯಾಣಕ್ಕಾಗಿ ಸದುಪಯೋಗಪಡಿಸಿಕೊಳ್ಳುವ ಕಾರ್ಯದಲ್ಲಿ ಕರ್ನಾಟಕ ಅದ್ಭುತ ಯಶಸ್ಸನ್ನು ಗಳಿಸಿದೆ. ನಮ್ಮ ನಾಡಿನ ಕೈಗಾರಿಕಾ ಕ್ಷೇತ್ರವು ಹಿಂದಿನ ಶತಮಾನದಲ್ಲಿ ನಿರೀಕ್ಷಿಸಿರುವ ಪ್ರಗತಿಯಲ್ಲಿ ಈಗಾಗಲೇ ಸಾಕಷ್ಟು ಸಾಧಿಸಿರುವುದಕ್ಕೆ ಮುಖ್ಯ ಪ್ರೇರಣೆ ಡಿ.ಡಾ.ಎಂ. ವಿಶ್ವೇಶ್ವರಯ್ಯನವರು. ಅವರು ತೋರಿದ ಮಾರ್ಗದರ್ಶನ ಇಂದಿಗೂ ನಮಗೆ ರಕ್ಷೆ ಹಾಗೂ ದೀಕ್ಷೆ.

ಸುಮಾರು ಎರಡು ಲಕ್ಷ ಚದರ ಕಿಲೋಮೀಟರ್ ವಿಸ್ತೀರ್ಣದಲ್ಲಿ ನೆಲೆಸಿರುವ ನಾಲ್ಕು ಕೋಟಿ ಕನ್ನಡಿಗರು ಸೌಮ್ಯತೆ, ಸೌಜನ್ಯ, ಶಾಂತಿಪರತೆ, ಪರಹಿತ ಚಿಂತನೆ, ಮತ ಸಹಿಷ್ಣುತೆ, ಸಂಯಮ, ದೇಶಪ್ರೇಮ, ಸ್ವಾಭಿಮಾನ ಮುಂತಾದ ಸದ್ಗುಣಗಳಿಂದ ಕೂಡಿದವರು. ರಾಷ್ಟ್ರದ ಸರ್ವತೋಮುಖ ಪ್ರಗತಿಗೆ ಕರ್ನಾಟಕದ ಕೊಡುಗೆ ಬಹು ಗಣನೀಯ. ರಾಷ್ಟ್ರ ನಿರ್ಮಾಣದ ಈ ಮಹತ್ಕಾರ್ಯವನ್ನು ಹೀಗೆಯೇ ಮುಂದುವರೆಸುವುದು ನಮ್ಮೆಲ್ಲರ ಕರ್ತವ್ಯ.

ಕರ್ನಾಟಕ ವಾರ್ತೆ

ಸಂಪಾದಕ: ಡಿ. ರಾಮಯ್ಯ. ಪ್ರಕಾಶಕ: ರಂಗಸ್ವಾಮಿ ಬೆಲ್ಲದಮಡು. 2ಬಿ, ಮುನೇಶ್ವರ ನಿಲಯ 2ನೇ ಕ್ರಾಸ್. 2ನೇ ಮೈನ್, ಎ.ಕೆ. ಕಾಲನಿ, ಹೊಸಕ್ಕೆ. [illegible]
ಮುದ್ರಣ : "ಸಂದೀಪ್ ಪ್ರಿಂಟರ್ಸ್", 718, ಮಾಗಡಿ, 6ನೇ ಮುಖ್ಯ ರಸ್ತೆ, ವಿಜಯನಗರ, ಬೆಂಗಳೂರು-40